ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಅಕ್ಟೋಬರ್ 09, 2021

ಸಂಪುಟ : 48 ಸಂಚಿಕೆ : 149 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ




ದಾವಲ್ ಪೇಟೆಯ ಶ್ರೀ ಚೌಡೇಶ್ವರಿ ದೇವಿ



ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ



ಜಾಲಿನಗರದ ಶ್ರೀ ಯಲ್ಲಮ್ಮ ದೇವಿ



ಶ್ರೀ ಕನ್ಯಕಾ ಪರಮೇಶ್ವರಿ ದೇವಿ



ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾದೇವಿ

ನವರಾತ್ರಿ ಹಿನ್ನೆಲೆಯಲ್ಲಿ ದಾವಣಗೆರೆಯ ವಿವಿಧ ದೇವತೆಗಳ ದೇವಾಲಯಗಳಲ್ಲಿ ಶುಕ್ರವಾರ ವಿಶೇಷ ಅಲಂಕಾರ ಮಾಡಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದರ್ಶನ ಪಡೆದರು.

## ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೆ

### ಕೇಂದ್ರ ಸರ್ಕಾರದದಿಂದ ಆರ್ಥಿಕ ನೆರವಿನ ಭರವಸೆ: ಸಿಎಂ ಬೊಮ್ಮಾಯಿ

ಬೆಂಗಳೂರು, ಅ. 8- ಜಿಲ್ಲಾಸ್ಪತ್ರೆಗಳನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನಾಗಿಯೂ, ತಾಲ್ಲೂಕು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಆರಂಭಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹಿಡಿದು ಎಲ್ಲಾ ರೀತಿಯ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ಆರ್ಥಿಕ ನೆರವಿನ ಭರವಸೆಯಿತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಒಂದು ದಿನದ ದೆಹಲಿ ಭೇಟಿಗೆ ತೆರಳಿದ ಮುಖ್ಯಮಂತ್ರಿಯವರು, ಇಂದು ಕೇಂದ್ರ ಆರೋಗ್ಯ ಮತ್ತು ರಾಸಾಯನಿಕ ಸಚಿವ ಮನ್ಸೂಕ್ ಮಾಂಡೋವಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

**ರಾಜ್ಯಕ್ಕೆ ಕೊರತೆಯಾಗಿರುವ ನಲವತ್ತೆರಡು ಸಾವಿರ ಮೆಟ್ರಿಕ್ ಟನ್ ರಸಗೊಬ್ಬರವನ್ನು ಒಂದು ವಾರದಲ್ಲಿ ಪೂರೈಸುವುದಾಗಿ ಕೇಂದ್ರ ಭರವಸೆ**

ಅಷ್ಟೇ ಅಲ್ಲ ಕೋವಿಡ್ ನಿಯಂತ್ರಣಕ್ಕಾಗಿ ಅಗತ್ಯವಿದ್ದಲ್ಲಿ, ಲಸಿಕೆಗಳನ್ನು ಪೂರೈಸುವುದಾಗಿಯು ತಿಳಿಸಿದ್ದಾರೆ. ಮಾಂಡೋವಿ ಅವರು ಇದೇ 10 ರಂದು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದು, ಈ ಸಂದರ್ಭದಲ್ಲಿ ರಾಜ್ಯದ ಬೇಡಿಕೆಗಳನ್ನು ಪರಿಶೀಲಿಸಿ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ನುಡಿದರು.

ಇದೇ ರೀತಿ ಈ ವರ್ಷದ ಅಂತ್ಯದೊಳಗಾಗಿ ರಾಜ್ಯದ ಶೇಕಡಾ ತೊಂಭತ್ತರಷ್ಟು ಜನರಿಗೆ ಕೊರೊನಾ ವ್ಯಾಕ್ಸಿನ್ ನೀಡಲು ಸರ್ಕಾರ ಉದ್ದೇಶಿಸಿದೆ ಎಂದವರು ಹೇಳಿದರು.

ಕೊರೊನಾ ವಿರುದ್ಧ ರಾಜ್ಯ ಪರಿಣಾಮಕಾರಿಯಾಗಿ ಹೋರಾಟ ನಡೆಸಿದ್ದು,ಈ ವಿಷಯದಲ್ಲಿ ರಾಜ್ಯದ ಸಾಧನೆಯನ್ನು ಕೇಂದ್ರ ಸಚಿವರು ಪ್ರಶಂಸಿಸಿದ್ದಾರೆ ಎಂದು ನುಡಿದರು.

ಇದಲ್ಲದೆ ಶೇಕಡಾ ಎಪ್ಪತ್ತರಷ್ಟು ಜನರಿಗೆ ಎರಡನೇ ಸುತ್ತಿನ ವ್ಯಾಕ್ಸಿನ್ ಕೊಡಲು ಸರ್ಕಾರ ಗುರಿ ಇರಿಸಿಕೊಂಡಿದೆ ಎಂದು ಹೇಳಿದರು.

ಈಗಾಗಲೇ ಶೇಕಡಾ ಎಂಭತ್ತೊಂದರಷ್ಟು ಜನರಿಗೆ ಮೊದಲ ಸುತ್ತಿನ ವ್ಯಾಕ್ಸಿನ್ (2ನೇ ಪುಟಕ್ಕೆ)

## 2ನೇ ದಿನವೂ ಮುಂದುವರಿದ ಐಟಿ ದಾಳಿ

ಬೆಂಗಳೂರು, ಅ. 8- ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಹೆಸರಿನಲ್ಲಿ ನಡೆದಿರುವ ಭ್ರಷ್ಟಾಚಾರ, ತೆರಿಗೆ ವಂಚನೆ ಮತ್ತು ಹಣದ ಅಕ್ರಮ ವಹಿವಾಟಿನ ಆರೋಪಕ್ಕೆ ಸಂಬಂಧಿಸಿದಂತೆ ಎರಡನೇ ದಿನವೂ ಆದಾಯ ತೆರಿಗೆ (ಐಟಿ) ಇಲಾಖಾ ಅಧಿಕಾರಿಗಳು ದಾಳಿ ರಾಜ್ಯಾದ್ಯಂತ ಮುಂದುವರೆಸಿದ್ದಾರೆ.

ಗೋವಾ ವಲಯದ ಅಧಿಕಾರಿಗಳ

**ಯಡಿಯೂರಪ್ಪ ಮತ್ತು ಅವರ ಪುತ್ರ, ಬಿಜೆಪಿಯ ರಾಜ್ಯ ಉಪಾಧ್ಯಕ್ಷ ಬಿ.ವೈ ರಾಘವೇಂದ್ರ ಅವರ ಸಹಪಾಠಿ ಮತ್ತು ಗುತ್ತಿಗೆದಾರರ ಮೇಲೂ ಸಹ ಇಂದು ದಾಳಿ ನಡೆಸಲಾಗಿದೆ.**

ಜೊತೆ ದೆಹಲಿಯಿಂದ ಬಂದಿರುವ ಹಿರಿಯ ಅಧಿಕಾರಿಗಳ ತಂಡ ಇಂದು ಸುಮಾರು 50ಕ್ಕೂ ಹೆಚ್ಚು ಕಡೆ ದಾಳಿ ನಡೆಸಿದೆ. ರಾಜ್ಯದಲ್ಲಿರುವ ಆದಾಯ ಅಧಿಕಾರಿಗಳನ್ನು ಬಳಸಿಕೊಂಡು, ದೆಹಲಿ ಅಧಿಕಾರಿಗಳು ಶೋಧ ನಡೆಸುತ್ತಿರುವುದಲ್ಲದೆ, ದಾಖಲೆಗೆ ಸಂಬಂಧಪಟ್ಟಂತೆ ಎಲ್ಲ ಮಾಹಿತಿಯನ್ನು ಕೇಂದ್ರ ಹಣಕಾಸು ಇಲಾಖೆಗೆ ರವಾನೆ ಮಾಡುತ್ತಿದ್ದಾರೆ.

ದೆಹಲಿ ಅಧಿಕಾರಿಗಳು ದಾಳಿ ನಡೆಸುತ್ತಿರುವುದರಿಂದ ರಾಜ್ಯ ಅಧಿಕಾರಿಗಳು ದಿನದ ಕೊನೆಯಲ್ಲಿ ದಾಳಿಯ ಬಗ್ಗೆ ನೀಡುತ್ತಿದ್ದ ಮಾಹಿತಿಯನ್ನು ನೀಡಿಲ್ಲ. ಕಾವೇರಿ, ಕೃಷ್ಣಾ (2ನೇ ಪುಟಕ್ಕೆ)

## ಕಮಿಷನ್ ಆಸೆಗೆ 2.70 ಲಕ್ಷ ಖೋತ

ದಾವಣಗೆರೆ, ಅ.8- ಆನ್ ಲೈನ್ ವಸ್ತುಗಳ ಖರೀದಿ ಕಂಪನಿಯ ಸೋಗಿನಲ್ಲಿ ಕಂಪನಿಯ ವಸ್ತುಗಳನ್ನು ಖರೀದಿಸಿದರೆ ಕಮೀಷನ್ ನೀಡುವುದಾಗಿ ನಂಬಿಸಿ, ಖಾಸಗಿ ಕಂಪನಿ ವ್ಯವಸ್ಥಾಪಕರೋರ್ವರಿಗೆ 2 ಲಕ್ಷದ 70 ಸಾವಿರ ಹಣವನ್ನು ವಂಚಿಸಿರುವ ಘಟನೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲ್ಲೂಕಿನ ಚಟ್ಟೋಬನಹಳ್ಳಿ (2ನೇ ಪುಟಕ್ಕೆ)

## ಕೆರೆಗಳ ನೀರು ಪವಿತ್ರವಾದದ್ದು ಶುಚಿತ್ವ ಕಾಪಾಡಿ

### ಆನಗೋಡು ಕೆರೆಗೆ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ತರಳಬಾಳು ಶ್ರೀ ಸಲಹೆ

ದಾವಣಗೆರೆ, ಸೆ.8- ಕೆರೆಯ ನೀರು ಪವಿತ್ರವಾದದ್ದು. ಅದನ್ನು ಯಾವ ಕಾರಣಕ್ಕೂ ಅಶುದ್ಧಗೊಳಿಸಬೇಡಿ. ಪವಿತ್ರ ಭಾವನೆಯಿಂದಲೇ ಕೆರೆಗೆ ಬನ್ನಿ ಎಂದು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಮೀಪದ ಆನಗೋಡು ಗ್ರಾಮದ 86 ಎಕರೆ ವಿಸ್ತೀರ್ಣದ ಕೆರೆಯು ಏತ ನೀರಾವರಿ ಹಾಗೂ ಇತ್ತೀಚೆಗೆ ಸುರಿದ ಮಳೆಯಿಂದಾಗಿ ತುಂಬಿದ ಹಿನ್ನೆಲೆಯಲ್ಲಿ ಶ್ರೀಗಳು, ಸಂಸದ ಜಿ.ಎಂ.ಸಿದ್ದೇಶ್ವರ ಅವರ ನೇತೃತ್ವದಲ್ಲಿ ಶುಕ್ರವಾರ ಬಾಗಿನ ಅರ್ಪಿಸಿ ಮಾತನಾಡಿದರು.

ಕೆರೆಗಳು ಒಣಗಿದ ಮೇಲೆ 'ಊರಿಗೆ ಬಂದವಳು ನೀರಿಗೆ ಬಾರಳೇ' ಎಂಬ ಗಾದೆ ಮಾತಿಗೆ ಅರ್ಥವಿಲ್ಲವಾಗಿದೆ. ಆದರೆ 'ಊರಿಗೆ ಬಂದವನು ಬಾರಿಗೆ ಬರುವುದಿಲ್ಲವೇ?' ಎಂಬ ಹೊಸ ಗಾದೆ ಹುಟ್ಟಿಕೊಂಡಿದೆ. ಈ ರೀತಿಯಾಗದೆ ಕೆರೆಯ ನೀರು ಬಳಸಿ ಆರ್ಥಿಕವಾಗಿ



ಪ್ರಗತಿ ಸಾಧಿಸಿ, ಬಂದ ಹಣವನ್ನು ಬಾರ್‌ಗೆ ಹಾಕಿ ದರ್ಬಾರ್ ಮಾಡಬಾರದು ಎಂದು ಗ್ರಾಮಸ್ಥರಿಗೆ ಶ್ರೀಗಳು ಕಿವಿ ಮಾತು ಹೇಳಿದು.

ನೀರು ಸಿಗದೆ ಕೃಷಿ ಚಟುವಟಿಕೆ ಕಷ್ಟ. ಎಷ್ಟೋ ತೋಟಗಳಲ್ಲಿನ ಮರಗಳನ್ನು ಕಡಿದ ಉದಾಹರಣೆಗಳಿವೆ. ಮಾಡಿದ ಸಾಲಕ್ಕಾಗಿ ಎಷ್ಟು ಕಷ್ಟ ಪಟ್ಟಿದ್ದೀರಿ ಎಂಬುದೂ ನಮಗೆ ತಿಳಿದಿದೆ. ಇದೀಗ ಕೆರೆಗೆ ನೀರು ಹರಿದಿರುವುದು ನಿಮಗೆ, ನಮಗೆಲ್ಲಾ ಖುಷಿಯಾಗಿದೆ. ಮುಂದಿನ ದಿನಗಳಲ್ಲಿ ಜವಾಬ್ದಾರಿಯಿಂದ ಉತ್ತಮ ಬೆಳೆಗಳನ್ನು ಬೆಳೆದು ಬಂದಂತಹ ಆದಾಯದಿಂದ ನಿಮ್ಮ ಕುಟುಂಬದವರಿಗೆ ಆಸರೆಯಾಗಿ ಉತ್ತಮ ಜೀವನ ಹೊಂದಬೇಕು ಎಂದರು.

ಮಲ್ಲಶೆಟ್ಟಿಹಳ್ಳಿ ಗ್ರಾಮದಲ್ಲಿ ದೇವ ಸ್ಥಾನಕ್ಕೆ ಸಂಬಂಧಿಸಿದ 20 ಎಕರೆಯಷ್ಟು ಜಾಗವನ್ನು ಗ್ರಾಮದ ಸಹಕಾರದಿಂದ ನೀರನ್ನು ಸಂಗ್ರಹಿಸುವುದಕ್ಕೆ ದೊಡ್ಡ ಕೆರೆ ನಿರ್ಮಿಸಿ ರೈತರಿಗೆ ಅನುಕೂಲವಾಗಿರುವುದನ್ನು ಶ್ರೀಗಳು ಸ್ಮರಿಸಿದರು.

ತ ರ ಳ ಬಾ ಳ ು (2ನೇ ಪುಟಕ್ಕೆ)

**ಹೆಂಡತಿಗೆ ಒಡವೆ ಮಾಡಿಸಿ**

ದುಡಿದ ಹಣವನ್ನು ಕುಟುಂಬದ ಸದಸ್ಯರಿಗೆ ಹಂಚಿದಾಗ ನಿಮ್ಮ ಸಂಪತ್ತು ವೃದ್ಧಿಯಾಗುತ್ತದೆ. ಬಂದಿರುವ ಆದಾಯದಲ್ಲಿ ಪತಿಯಾದವರು ಪತ್ನಿಯರಿಗೆ ಒಡವೆ ಮಾಡಿಸಿ ಕೊಟ್ಟರೆ ಅದು ಬ್ಯಾಂಕ್‌ನಲ್ಲಿ ಡೆಪಾಸಿಟ್ ಮಾಡಿದ ಹಾಗೆ ಎಂದು ತರಳಬಾಳು ಶ್ರೀಗಳು ಹೇಳಿದರು.

ಒಬ್ಬ ಮಹಿಳೆಯು ಒಂದು ಬ್ಯಾಂಕ್ ಇದ್ದ ಹಾಗೆ. ಮಹಿಳೆಯರು ಹಣವನ್ನು ದುರುಪಯೋಗ ಮಾಡುವುದಿಲ್ಲ, ಬದಲಾಗಿ ಅವರು ಕೂಡಿಡುವ ಮನಸ್ಸುಳ್ಳವರು ಎಂದು ನಗೆ ಚಟಾಕಿ ಹಾರಿಸಿದಾಗ ಯುವಕರು ಶ್ರೀಗಳ ಮಾತಿಗೆ ಚಪ್ಪಾಳೆ ತಟ್ಟಿದರು.

## ಏತ ನೀರಾವರಿ ಯೋಜನೆಗಳು ನಿಗದಿತ ಅವಧಿಯಲ್ಲಿ ಕಾರ್ಯಾರಂಭ ಮಾಡಲಿ



ದಾವಣಗೆರೆ, ಸೆ.8- 121 ಕೆರೆಗಳ ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ, 57 ಕೆರೆಗಳ ಜಗಳೂರು ಏತ ನೀರಾವರಿ ಯೋಜನೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿ ಎಂದು ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಜಿ.ಎಂ.ಐ.ಟಿ. ಅತಿಥಿ ಗೃಹದಲ್ಲಿ ಕರೆದಿದ್ದ ನೀರಾವರಿ ಯೋಜನೆಗಳ ಸಾಧಕ ಬಾಧಕಗಳ ಸಮಾಲೋಚನಾ

**ನೀರಾವರಿ ಯೋಜನೆಗಳ ಸಾಧಕ-ಬಾಧಕಗಳ ಸಮಾಲೋಚನಾ ಸಭೆಯಲ್ಲಿ ಅಧಿಕಾರಿಗಳಿಗೆ ತರಳಬಾಳು ಶ್ರೀ ಸಲಹೆ**

ಸಭೆಯಲ್ಲಿ ಮಾತನಾಡಿದ ಶ್ರೀಗಳು, ಈ ಏತ ನೀರಾವರಿ ಯೋಜನೆಗಳಡಿ ಕೆಲಸ ಮಾಡಲು ಸಿಕ್ಕಿರುವ ಅವಕಾಶ ನಿಮ್ಮೆಲ್ಲರ ಪುಣ್ಯ ಎಂದು ಭಾವಿಸಿ ಕಾರ್ಯ ನಿರ್ವಹಿಸುವಂತೆ ಎಂಜಿನಿಯರ್‌ಗಳಿಗೆ ಕಿವಿ ಮಾತು ಹೇಳಿದರು.

ಕೆಲಸ ಮಾಡುವ ಇಚ್ಛಾಶಕ್ತಿ ನಿಮಗಿರಬೇಕು. ಆಗ ನಿಮ್ಮ ಈ ಕೆಲಸವನ್ನು ಮುಂದಿನ ತಲೆಮಾರು ನೆನಪಿನಲ್ಲಿಟ್ಟುಕೊಳ್ಳುತ್ತದೆ. ಭರಮಸಾಗರ ಏತ ನೀರಾವರಿ ಯೋಜನೆಗೆ ಅನೇಕ ಅಡ್ಡಿ ಆತಂಕಗಳು ಎದುರಾದವು. ಅವನ್ನೆಲ್ಲಾ ಮೆಟ್ಟಿನಿಂತು ಕಳೆದ ಸೆ.29 ರಂದು ಭರಮಸಾಗರ ಕೆರೆಗೆ ನೀರು ತಲುಪಿಸುವಲ್ಲಿ (2ನೇ ಪುಟಕ್ಕೆ)

## ದಾವಣಗೆರೆ ಷುಗರ್ : ಕಬ್ಬು ಅರಿಯುವಿಕೆಗೆ ಚಾಲನೆ



ದಾವಣಗೆರೆ, ಅ.8- ಇಲ್ಲಿಗೆ ಸಮೀಪದ ಕುಕ್ಕುವಾಡದಲ್ಲಿ ರುವ ದಾವಣಗೆರೆ ಷುಗರ್ ಕಂಪನಿಯಲ್ಲಿ ಈ ಸಾಲಿನ ಕಬ್ಬು ಅರಿಯುವಿಕೆಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರೂ ಆದ ಹಿರಿಯ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಹಾಗು ಕಾರ್ಯನಿರ್ವಾಹಕ ನಿರ್ದೇಶಕ ಅಭಿಜಿತ್ ಜಿ. ಶಾಮನೂರು ಅವರುಗಳು ಇಂದು ಚಾಲನೆ ನೀಡಿದರು.

ಶ್ರೀ ಗಣಪತಿ, ಶ್ರೀ ಸರಸ್ವತಿ ಮತ್ತು ಶ್ರೀ ಲಕ್ಷ್ಮಿ ಪೂಜೆ ನೆರವೇರಿಸಿದ ನಂತರ ಕಬ್ಬನ್ನು ಕ್ಯಾರಿಯರ್‌ಗೆ ಹಾಕುವ ಮುಖಾಂತರ ಕಬ್ಬು ಅರೆಯುವುದಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು, ಕಬ್ಬು ಬೆಳೆಗಾರರು, ರೈತ ಬಾಂಧವರು ಹಾಗೂ ಕಾರ್ಖಾನೆಯ ಆಡಳಿತ ಅಧಿಕಾರಿಗಳು, ನೌಕರರು ಮತ್ತು ಕಾರ್ಮಿಕ ವರ್ಗದವರು ಭಾಗವಹಿಸಿದ್ದರು.

## ನೀರಾವರಿ ನಿಗಮ, ಹೇಮಾವತಿ ಎಡದಂಡೆ ನಾಲೆಗಳ ಕಚೇರಿ ಸ್ಥಳಾಂತರಕ್ಕೆ ಅನುಮೋದನೆ

ಬೆಂಗಳೂರು, ಅ. 8- ಆಡಳಿತಾತ್ಮಕ ದೃಷ್ಟಿಯಿಂದ ಕೆಆರ್ ಪೇಟೆ ಹಾಗೂ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಾವೇರಿ ನೀರಾವರಿ ನಿಗಮ ಹಾಗೂ ಹೇಮಾವತಿ ಎಡದಂಡೆ ನಾಲೆಗಳ ಕಚೇರಿಗಳನ್ನು ಸ್ಥಳಾಂತರ ಮಾಡಲು ಸರ್ಕಾರ ಅನುಮೋದನೆ ನೀಡಿದೆ.

ಹಾಸನ ಜಿಲ್ಲೆ ಶ್ರವಣಬೆಳಗೊಳ ತಾಲ್ಲೂಕು ವ್ಯಾಪ್ತಿಯ ದೊಡ್ಡಕಾಡನೂರು ಹಾಗೂ ಶ್ರವಣಬೆಳಗೊಳದಲ್ಲಿರುವ ಹೇಮಾವತಿ ನಾಲಾ ವಿಭಾಗದಲ್ಲಿ ಕೆಆರ್ ಪೇಟೆ ವಿಧಾನಸಭಾ ಕ್ಷೇತ್ರದ ಭಾಗವನ್ನು ಮಂಡ್ಯ ಜಿಲ್ಲೆ ಕೆಆರ್ ಪೇಟೆ ಹೇಮಾವತಿ ಎಡದಂಡೆ ನಾಲಾ ವಿಭಾಗಕ್ಕೆ ಸ್ಥಳಾಂತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಅದೇ ರೀತಿ ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲ್ಲೂಕು ವ್ಯಾಪ್ತಿಯ ಕಿಕ್ಕೇರಿಯಲ್ಲಿರುವ ಹೇಮಾವತಿ ನಾಲಾ ಉಪ ವಿಭಾಗದ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಭಾಗವನ್ನು ಆ ಭಾಗದ ಮುಖ್ಯನಾಲೆ, ವಿತರಣಾ ನಾಲೆಗಳು ಮತ್ತು ಕೆರೆಗಳ ಸಮೇತ ನಂ 3 ಹೇಮಾವತಿ ಎಡದಂಡೆ ನಾಲಾ ವಿಭಾಗ ಚನ್ನರಾಯಪಟ್ಟಣ ವ್ಯಾಪ್ತಿಗೆ ಸ್ಥಳಾಂತರಿಸಲು ಸರ್ಕಾರ ಅನುಮೋದನೆ ಕೊಟ್ಟಿದೆ.

ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ ಉಪ ವಿಭಾಗದ ಭಾಗಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿಭಾಗೀಯ ಕಚೇರಿಗಳಿಗೆ ಸ್ಥಳಾಂತರ ಮಾಡುವುದರಿಂದ ಆಡಳಿತಾತ್ಮಕ ಹಾಗೂ ಆ ಭಾಗದ ಜನರಿಗೂ ಅನುಕೂಲ ಆಗಲಿದೆ.

## ಮುರುಘಾ ಮಠದಲ್ಲಿ ಶಿಲಾ ಮಂಟಪದ ಕಳಸಾರೋಹಣ




ಚಿತ್ರದುರ್ಗ ಅ.8 - ಶ್ರೀ ಮುರುಘಾಮಠದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಮುರುಘಾಶ್ರೀ ಬೃಹತ್ ಶಿಲಾಮಂಟಪದ ಕಳಸಾರೋಹಣವನ್ನು ಡಾ. ಶಿವಮೂರ್ತಿ ಮುರುಘಾ ಶರಣರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಶಿವಬಸವ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ ಮುಂತಾದ ಹರಗುರು ಚರಮೂರ್ತಿಗಳು ಉಪಸ್ಥಿತರಿದ್ದರು.




## ಮೌಲ್ಯಗಳನ್ನು ಬಿತ್ತಿ ಬೆಳೆಯುವವರು ಬೇಕಿದೆ : ಸಾಣೇಹಳ್ಳಿ ಶ್ರೀ

ದಾವಣಗೆರೆ, ಅ. 8- ಪ್ರಸ್ತುತ ದಿನಗಳಲ್ಲಿ ಹಣವನ್ನು ಬಿತ್ತಿ ಹಣವನ್ನು ಬೆಳೆಯುವವರ ಬದಲಾಗಿ ಸಮಾಜದಲ್ಲಿ ಮೌಲ್ಯಗಳನ್ನು ಬಿತ್ತಿ ಮೌಲ್ಯಗಳನ್ನು ಬೆಳೆಯುವಂತವರು ಬೇಕಾಗಿದ್ದಾರೆ ಎಂದು ಸಾಣೇಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ 'ಉದಕದೊಳಗಿನ ಕಿಚ್ಚು' ಸಿನಿಮಾದ ಪೋಸ್ಟರ್ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.



ಪ್ರತಿ ದಿನವೂ ಲಕ್ಷಾಂತರ ರೂ. ತೆರಿಗೆ ಕಟ್ಟುವ ಶ್ರೀಮಂತರು ನಮ್ಮೊಂದಿಗಿದ್ದಾರೆ. ಆದರೆ ಅವರು ಸಮಾಜದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆ ಬೆಳೆಸುವ, ಜನರಲ್ಲಿ ನೈತಿಕ ಪ್ರಜ್ಞೆ ಜಾಗೃತಗೊಳಿಸುವ, ಸುಂದರ ಸಮಾಜ ನಿರ್ಮಿಸಲು ಹಣವನ್ನು ಸದ್ವಿನಿಯೋಗಿಸುತ್ತಿಲ್ಲ ಎಂದರು.

ಯಾರು ಹಣದ ಹಿಂದೆ ಓಡುತ್ತಾರೋ ಅವರಿಗೆ ಸಾಹಿತ್ಯ, ಸಂಗೀತ, ಕಲೆ, ಧರ್ಮದ ಮೌಲ್ಯಗಳು ಬೇಕಾಗಿರುವುದಿಲ್ಲ. ಮೌಲ್ಯಗಳನ್ನು ಬೆಳೆಸುವ ಕೆಲಸ ನಮ್ಮದಲ್ಲ ಎಂದು ಹೊಣೆಗಾರಿಕೆಯಿಂದ ಜಾರಿಗೊಳ್ಳದೆ, ನಮ್ಮದೂ ಹೊಣೆಗಾರಿಕೆ ಇದೆ ಎಂದು ಎಲ್ಲರೂ ಅರ್ಥ ಮಾಡಿಕೊಂಡಾಗ ಸಂಪಾದನೆಯ ಒಂದಿಷ್ಟು ಹಣ ವಿನಿಯೋಗಿಸಲು ಅವಕಾಶ ಒದಗಿ ಬರುತ್ತದೆ ಎಂದರು.

ದಯವೇ ಧರ್ಮದ ಮೂಲ ಎಂದು ಒಂದು ಕಡೆ ಹೇಳುವ ಜನರು ಮತ್ತೊಂದು ಕಡೆ ಭಯವನ್ನೇ ಧರ್ಮದ ಮೂಲ ಮಾಡಿಕೊಳ್ಳುವುದನ್ನು ಕಾಣುತ್ತಿದ್ದೇವೆ. ವೈದಿಕ ಪರಂಪರೆ ನಮ್ಮನ್ನುಯಾವ ದಿಕ್ಕಿನ ಕಡೆ ಕೊಂಡೊಯ್ಯುತ್ತಿದೆ ಎಂಬ ಅರಿವಿದ್ದರೂ ಮತ್ತೆ ಮತ್ತೆ ಜನರು ಅದೇ ಪರಂಪರೆಯನ್ನು ಅಪ್ಪಿಕೊಳ್ಳುತ್ತಿದ್ದಾರೆ. ಅಂತವರಿಗೆ ಮಾರ್ಗದರ್ಶನ ಮಾಡುವುದೇ ಈ ಚಿತ್ರತಂಡದ ಉದ್ದೇಶವಾಗಿದೆ ಎಂದರು.

ಚಲನಚಿತ್ರಕ್ಕೂ ಸ್ವಾಮೀಜಿಗಳಿಗೂ ಏನು ಸಂಬಂಧ ಎಂದು ಭಕ್ತರಿಗೆ (2ನೇ ಪುಟಕ್ಕೆ)

## ಪುಷ್ಕರಣಿ ಕಾಮಗಾರಿ ವೀಕ್ಷಿಸಿದ ಶಾಸಕ ಪೂಜಾರ್


**ರಾಣೇಬೆನ್ನೂರು**

ರಾಣೇಬೆನ್ನೂರು, ಅ. 8- ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನ ಸೇರಿದಂತೆ ಎಲ್ಲ ಸಮುದಾಯಗಳ ಭಕ್ತರನ್ನೊಳಗೊಂಡು ಭಾವೈಕ್ಯತೆಯ ದೇವಿ ಎನಿಸಿಕೊಂಡಿರುವ ರಾಣೇಬೆನ್ನೂರು ನಗರದೇವತೆಯ ಮಂದಿರದ ಎದುರು ನೂತನವಾಗಿ ನಿರ್ಮಾಣವಾಗುತ್ತಿರುವ ಪುಷ್ಕರಣಿಯ ಕಾಮಗಾರಿಯನ್ನು ಶಾಸಕ ಅರುಣಕುಮಾರ ಇಂದು (2ನೇ ಪುಟಕ್ಕೆ)

# ಹೊನ್ನಾಳಿ ತಾಲ್ಲೂಕಿನಲ್ಲಿ ಮುಖ್ಯಮಂತ್ರಿ ಗ್ರಾಮ ವಾಸ್ತವ್ಯ

## ಕಾರ್ಯಕ್ರಮದ ಸಿದ್ಧತೆಗಾಗಿ ಅಧಿಕಾರಿಗಳ ಸಭೆ ನಡೆಸಿದ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್

ಹೊನ್ನಾಳಿ, ಅ.8- ಸಾರ್ವಜನಿಕರ ಅಹವಾಲು ಸ್ವೀಕರಿಸುವ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಕೋವಿಡ್‌ನಿಂದ ನಿಲುಗಡೆಯಾಗಿದ್ದು, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಹಾಗೂ ಕುಂದೂರು ಗ್ರಾಮಗಳಿಂದ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಚಾಲನೆಯಾಗಲಿದೆ ಎಂದು ಜಿಲ್ಲಾ ಉಪವಿಭಾಗಾಧಿಕಾರಿ ಶ್ರೀಮತಿ ಮಮತ ಹೊಸಗೌಡರ್ ತಿಳಿಸಿದ್ದಾರೆ.



ತಾಲ್ಲೂಕು ಸಭಾಂಗಣದಲ್ಲಿ ಹೊನ್ನಾಳಿ ಮತ್ತು ನ್ಯಾಮತಿ ತಹಶೀಲ್ದಾರ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ್ ಅವರುಗಳು ಇದೇ ದಿನಾಂಕ 16 ರಂದು ಆಗಮಿಸಲಿದ್ದು, ಶಿಶು ಅಭಿವೃದ್ಧಿ ಇಲಾಖೆ ಯೋಜನೆಯ ತಾಲ್ಲೂಕು ಮಟ್ಟದ ವಿವಿಧ ಇಲಾಖೆ ಸವಲತ್ತುಗಳು ಮತ್ತು ಬಾಕಿ ಇರುವ ಯೋಜನೆಗಳು, ಸವಲತ್ತುಗಳನ್ನು ಜನರಿಗೆ ತಲುಪುವಂತೆ ಅಧಿಕಾರಿಗಳು ಕೆಲಸ ನಿರ್ವಹಿಸಬೇಕು ಎಂದು ಹೇಳಿದರು.

ಕೋವಿಡ್‌ನಿಂದ ಬಿಪಿಎಲ್ ಕಾರ್ಡುದಾರರ ಮನೆಯ ಮುಖ್ಯಸ್ಥ ಸಾವನ್ನಪ್ಪಿದಲ್ಲಿ ಸರ್ಕಾರದಿಂದ 1 ಲಕ್ಷ ರೂ. ಪರಿಹಾರದ ಚೆಕ್ಕನ್ನು ಮುಖ್ಯಮಂತ್ರಿಗಳಿಂದ ಕೊಡಿಸಲು ನ್ಯಾಮತಿ ಮತ್ತು ಹೊನ್ನಾಳಿ ತಾಲ್ಲೂಕಿನ ಫಲಾನುಭವಿಗಳ ಮಾಹಿತಿಗಳನ್ನು ನೀಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಸಭೆಗೆ ಕಾರ್ಮಿಕ ಅಧಿಕಾರಿ ಬಾರದಿರುವುದರಿಂದ ಅವರಿಗೆ ನೋಟಿಸ್ ಜಾರಿ ಮಾಡಿ ಎಂದು ಉಪವಿಭಾಗಾಧಿಕಾರಿಗಳು ತಹಶೀಲ್ದಾರ್‌ಗೆ ಸೂಚಿಸಿದರರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಬಸವನಗೌಡ ಕೋಟೂರ, ನ್ಯಾಮತಿ ತಹಶೀಲ್ದಾರ್ ತನುಜಾ ಸೌದತ್ತಿ, ಉಪ ತಹಶೀಲ್ದಾರ್ ನಾಗರಾಜ್, ಸಿಪಿಐ ದೇವರಾಜ್, ಪಿಎಸ್‌ಐ ಬಸವನಗೌಡ ಬಿರಾದಾರ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಆರ್. ಬಂತಿ, ಬಿಇಓ ರಾಜೀವ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಬಸವರಾಜು, ಕೃಷಿ ಅಧಿಕಾರಿ ಸುರೇಶ್ ಇನ್ನಿತರೆ ಅಧಿಕಾರಿಗಳು ಹಾಜರಿದ್ದರು.

## ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೆ

**(1ನೇ ಪುಟದಿಂದ)** ನೀಡಲಾಗಿದ್ದು, ಶೇಕಡಾ ಮೂವತ್ತೇಳರಷ್ಟು ಜನರಿಗೆ ಎರಡನೇ ಸುತ್ತಿನ ವ್ಯಾಕ್ಸಿನ್ ನೀಡಲಾಗಿದೆ ಎಂದು ವಿವರಿಸಿದರು.

ಕಳೆದ ಒಂದು ತಿಂಗಳಲ್ಲಿ ರಾಜ್ಯದ 1.48 ಕೋಟಿ ಜನರಿಗೆ ವ್ಯಾಕ್ಸಿನ್ ನೀಡಲಾಗಿದೆ ಎಂದ ಅವರು,ಇನ್ನೂ ಐವತ್ತೊಂದು ಲಕ್ಷ ವ್ಯಾಕ್ಸಿನ್ ಸಂಗ್ರಹಿಸಲಾಗಿದೆ ಎಂದು ನುಡಿದರು.

ರಾಜ್ಯಕ್ಕೆ ಕೊರತೆಯಾಗಿರುವ ನಲವತ್ತೆರಡು ಸಾವಿರ ಮೆಟ್ರಿಕ್ ಟನ್ ರಸಗೊಬ್ಬರವನ್ನು ಒಂದು ವಾರದಲ್ಲಿ ಪೂರೈಸುವುದಾಗಿ ಭರವಸೆ ನೀಡಿದ್ದು, ಹಿಂಗಾರು ಹಂಗಾಮಿನಲ್ಲಿ ರಾಜ್ಯಕ್ಕೆ ಮೂವತ್ತೆರಡು ಸಾವಿರ ಮೆಟ್ರಿಕ್ ಟನ್ ಡಿಎಪಿ ರಸಗೊಬ್ಬರದ ಅಗತ್ಯವಿದ್ದು, ಹತ್ತು ಸಾವಿರ ಮೆಟ್ರಿಕ್ ಟನ್‌ಗಳಷ್ಟು ಎಂಓಪಿ ರಸಗೊಬ್ಬರದ ಅಗತ್ಯವಿದೆ ಎಂದು ಅವರು ಹೇಳಿದರು. ಈ ಮಧ್ಯೆ ರಾಜ್ಯಕ್ಕೆ ಅಗತ್ಯವಾದ 79800 ಮೆಟ್ರಿಕ್ ಟನ್ ಯೂರಿಯಾ ಪೂರೈಸುವುದಾಗಿ ಕೇಂದ್ರ ಸರ್ಕಾರ ಈಗಾಗಲೇ ಭರವಸೆ ನೀಡಿದ್ದು, ಉಳಿದಂತೆ ಡಿಎಪಿ ಮತ್ತು ಎಂಓಪಿ ರಸಗೊಬ್ಬರ ಇನ್ನೊಂದು ವಾರದೊಳಗಾಗಿ ಪೂರೈಕೆಯಾಗಲಿದೆ ಎಂದು ಹೇಳಿದರು.

## ಬೆಳ್ಳೂಡಿ ಶಾಖಾ ಮಠದಲ್ಲಿ ಇಂದು ಕುರುಬ ಸಮಾಜದ ಸಭೆ

ಹರಿಹರ ತಾಲ್ಲೂಕು ಕುರುಬ ಸಮಾಜ ಬಾಂಧವರ ಸಭೆಯನ್ನು ಇಂದು ಬೆಳಿಗ್ಗೆ 10.30 ಕ್ಕೆ ಬೆಳ್ಳೂಡಿ ಶಾಖಾ ಮಠದಲ್ಲಿ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕರೆಯಲಾಗಿದೆ ಎಂದು ಹರಿಹರ ತಾ. ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

## ನೀರು ಪವಿತ್ರವಾದದ್ದು ಶುಚಿತ್ವ ಕಾಪಾಡಿ

**(1ನೇ ಪುಟದಿಂದ)** ಡಾ.ಶ್ರೀಗಳ ಕೆರೆ ಹೋರಾಟ ಮತ್ತು ರೈತ ಪರ ಕಾಳಜಿಗೆ ಸಂಪೂರ್ಣ ಬೆನ್ನೆಲುಬಾಗಿ ನಿಲ್ಲುತ್ತೇವೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದರು.

ತರಳಬಾಳು ಶ್ರೀಗಳವರ 22 ಕೆರೆ ಹೋರಾಟದಲ್ಲಿ ನಾವು ಯಾವ ಸಹಕಾರ ಬೇಕಾದರೂ ನೀಡಲು ಮುಂದಾಗುತ್ತೇವೆ ಎಂದು ಹೆಬ್ಬಾಳು ಮಠದ ಶ್ರೀ ಮಹಾಂತರುದ್ರೇಶ್ವರ ಸ್ವಾಮೀಜಿ ನುಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ಗ್ರಾಮಗಳ ರೈತರ ಕಾಳಜಿಗಾಗಿ ಕೆರೆ ನೀರಿನ ಹೋರಾಟದಲ್ಲಿ ಡಾ.ಶ್ರೀಗಳವರು ಹಗಲಿರುಳು ಶ್ರಮಿಸುತ್ತಾ ಬಂದಿದ್ದಾರೆ. ಇಂತಹ ಸ್ವಾಮೀಜಿಯವರನ್ನು ಪಡೆದ ನಾವೇ ಧನ್ಯರು ಎಂದರು.

ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ, ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವರಾಜ್, ಶಶಿಧರ ಹೆಮ್ಮನ ಬೇತೂರು ಮತ್ತಿತರರು ಉಪಸ್ಥಿತರಿದ್ದರು.

## ಕಾಮಗಾರಿ ವೀಕ್ಷಿಸಿದ ಶಾಸಕ ಪೂಜಾರ್



**(1ನೇ ಪುಟದಿಂದ)** ವೀಕ್ಷಿಸಿದರು.

41/33 ಉದ್ದಗಲ ಆಳತೆಯ ಪುಷ್ಕರಣಿಯು ಸಂಪೂರ್ಣ ಕಲ್ಲಿನಿಂದ ನಿರ್ಮಾಣವಾಗುತ್ತಿದ್ದು, ಅಂದಾಜು ವೆಚ್ಚ ಸುಮಾರು 40 ಲಕ್ಷ ರೂಪಾಯಿಗಳಾಗಿದೆ. ಶಿಲ್ಪಿ ಕಾರ್ಕಳದ ರವಿ ಹಾಗೂ ದೇವಸ್ಥಾನ ಸಮಿತಿ ಸದಸ್ಯರ ಜೊತೆ ಶಾಸಕರು ಚರ್ಚಿಸಿದರು.

ಪುಷ್ಕರಣಿಯ ನಾಲ್ಕೂ ದಿಕ್ಕಿನಲ್ಲಿ ಗಂಗಾಜಲ ಹರಿದು ಬರುತ್ತಿರುವುದು ವಿಶೇಷ. ಇಂತಹ ಪುಷ್ಕರಣಿ ಜಿಲ್ಲೆಯ ಎಲ್ಲೂ ಇಲ್ಲ. ಪುಷ್ಕರಣಿಯಲ್ಲಿ ಮಂಟಪಗಳನ್ನು ನಿರ್ಮಾಣ ಮಾಡುತ್ತಿದ್ದು ಸಪ್ತಮಾತೃಕೆಯರ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಶ್ರಾವಣದ ಮೊದಲ ಮಂಗಳವಾರ ಪ್ರಾರಂಭಗೊಂಡಿರುವ ಈ ಕಾಮಗಾರಿ ಗೌರಿ ಹುಣ್ಣಿಮೆಗೆ ಪೂರ್ಣ ಗೊಳ್ಳಲಿದೆ. ಅಂದು ಏಳು ನದಿಗಳ ಪವಿತ್ರ ಜಲ ತಂದು ಉದ್ಘಾಟನೆ ಕಾರ್ಯ ನೆರವೇರಿಸಲಾಗುವುದು ಎಂದು ಶಾಸಕರು ವಿವರಿಸಿದರು.

ಜಿ.ಪಂ. ಮಾಜಿ ಸದಸ್ಯೆ ಮಂಗಳಗೌರಿ ಪೂಜಾರ, ದೇವಾಲಯ ಸಮಿತಿ ಅಧ್ಯಕ್ಷ ಬಸವರಾಜ ನಾಯಕ, ಲಕ್ಷ್ಮಣ ಚಿಂತಾ, ಶಶಿಧರ ಬಸೇನಾಯ್ಕ, ನಾರಾಯಣ ಬಿಷ್ಟಣ್ಣನವರ, ರಾಮಣ್ಣ ಕಾಕಿ, ಗಾಂಧಿರಾಜ ಬ್ಯಾಡಗಿ, ಶಾಂತಲಿಂಗಪ್ಪ ಅಣಬೇರು ಇನ್ನಿತರರಿದ್ದರು.

## ಕಮಿಷನ್ ಆಸೆಗೆ 2.70 ಲಕ್ಷ ಖೋತ

**(1ನೇ ಪುಟದಿಂದ)** ಗ್ರಾಮದ ಎನ್. ರವಿನಾಯ್ಕ ವಂಚನೆಗೊಳಗಾದವರು. ತಮ್ಮ ಮೊಬೈಲ್ ನಂಬರ್ ಗೆ ಬಂದ ಸಂದೇಶದಲ್ಲಿ ಕಳುಹಿಸಿದ್ದ ಲಿಂಕ್ ಅನ್ನು ಒತ್ತಿದಾಗ ಅಲ್ಲಿ ಬಂದ ಮೊಬೈಲ್ ನಂಬರ್‌ನಿಂದ ವಾಟ್ಸಾಪ್ ಚಾಟ್ ಒಪನ್ ಆಗಿದ್ದು, ಚಾಟ್ ಮಾಡಿದಾಗ ಬಂದ ಮತ್ತೊಂದು ಲಿಂಕ್ ಒಪನ್ ಮಾಡಿದಾಗ, ಕಂಪನಿಯ ವಿವಿಧ ವಸ್ತುಗಳನ್ನು ಖರೀದಿಸಿದರೆ ಮೂನ್ ಸ್ಟಾರ್ ಅಮೆಜಾನ್ ಕಂಪನಿಯಿಂದ ಕಮೀಷನ್ ಹಣ ಹಿಂದಿರುಗಿಸುವುದಾಗಿ ತಿಳಿಸಿದ್ದು, ಇದನ್ನೇ ನಂಬಿದ ರವಿನಾಯ್ಕ ಮೊದಲಿಗೆ 200 ರೂ. ಆನ್ ಲೈನ್ ಮೂಲಕ ಕಳುಹಿಸಿದ್ದು, ಆಗ 380 ರೂ. ಗಳನ್ನು ಕಮೀಷನ್ ರೂಪದಲ್ಲಿ ಕಳುಹಿಸಲಾಗಿದೆ.


ಪುನಃ ಈತ ಆನ್ ಲೈನ್ ಮುಖೇನ 4,500 ರೂ.ಗಳ ವಸ್ತುಗಳ ಖರಿದಿಸಿದ್ದು, ಅದಕ್ಕೆ 6,033 ರೂ. ಗಳ ಕಮೀಷನ್ ಜಮಾ ಮಾಡಲಾಗಿದೆ. ಹೀಗೆ ಕಮೀಷನ್ ಆಸೆಗೆ ಬಿದ್ದು ವಸ್ತುಗಳನ್ನು ಖರೀದಿಸುವ ರವಿನಾಯ್ಕನ ಸ್ಪಂದನೆಯನ್ನೇ ಬಂಡವಾಳವಾಗಿಸಿಕೊಂಡ ಮೋಸದ ಜಾಲವು, ಈತನ ಒಟ್ಟು 3 ಬ್ಯಾಂಕ್ ಖಾತೆಗಳಿಂದ ಹಂತ ಹಂತವಾಗಿ ಒಟ್ಟು 2 ಲಕ್ಷದ 70 ಸಾವಿರ ರೂ. ಹಣವನ್ನು ಆನ್ ಲೈನ್ ಮುಖಾಂತರ ವರ್ಗಾವಣೆ ಮಾಡಿಕೊಂಡು ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಲೇಡಿಸ್ ಕ್ಲಬ್‌ನಿಂದ ದಾಂಡಿಯಾ ನೃತ್ಯ ಸ್ಪರ್ಧೆ

ದಾವಣಗೆರೆ, ಅ.8 - ಲೇಡಿಸ್ ಕ್ಲಬ್ ವತಿಯಿಂದ ಎಬಿಸಿಡಿ+ ನೃತ್ಯ ಸಂಸ್ಥೆಯ ಇವರ ಸಹಯೋಗದಲ್ಲಿ ದಸರಾ ಹಬ್ಬದ ಪ್ರಯುಕ್ತ ಇದೇ ದಿನಾಂಕ 11 ರ ಸೋಮವಾರ ಸಂಜೆ 5 ಗಂಟೆಗೆ ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ದಾಂಡಿಯಾ ಧಮಾಲ್' ನೃತ್ಯ ಸ್ಪರ್ಧೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ನಗದು ಬಹುಮಾನವನ್ನು ಸ್ಥಳದಲ್ಲೇ ವಿತರಿಸಲಾಗುವುದು ಎಂದು ಲೇಡಿಸ್ ಕ್ಲಬ್ ಸಂಸ್ಥಾಪಕರಾದ ಶ್ರೀಮತಿ ಅಮೀರಾಬಾನು ತಿಳಿಸಿದ್ದಾರೆ.


**ಚನ್ನಾಪುರದ ಕೊಟ್ರಬಸಮ್ಮ ನಿಧನ**



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಚನ್ನಾಪುರ ಗ್ರಾಮದ
ದಿ. ಟಿ.ಸಿ.ಎಂ. ಕೊಟ್ರಬಸಯ್ಯ ಇವರ ಧರ್ಮಪತ್ನಿ

**ಶ್ರೀಮತಿ ಕೊಟ್ರಬಸಮ್ಮ**

ಅವರು, ದಿನಾಂಕ 8.10.2021ರ ಶುಕ್ರವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಏಳು ಜನ ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.10.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಚನ್ನಾಪುರದ ಮಠದ ಸಮೀಪದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊ: 99004 36179**


# ಮೌಲ್ಯಗಳನ್ನು ಬಿತ್ತಿ ಬೆಳೆಯುವವರು ಬೇಕಿದೆ : ಸಾಣೇಹಳ್ಳಿ ಶ್ರೀ



**(1ನೇ ಪುಟದಿಂದ)** ಆಶ್ಚರ್ಯವಾಗಬಹುದು. ಆದರೆ ಬಸವ ತತ್ವಕ್ಕೂ ಸ್ವಾಮೀಜಿಗಳಿಗೂ ಸಂಬಂಧವಿದೆ. ಬಸವ ತತ್ವಗಳನ್ನು ಯಾರು ಯಾವ ಮಾಧ್ಯಮಗಳ ಮೂಲಕ ಜನರ ಮನಸ್ಸಿಗೆ ತಟ್ಟುವ ಹಾಗೆ ಮಾಡುತ್ತಾರೋ ಅವರೆಲ್ಲರೂ ನಮಗೆ ಬೇಕಾದವರೇ ಎಂದು ಶ್ರೀಗಳು ಸ್ಪಷ್ಟಪಡಿಸಿದರು.

ಹಿರಿಯ ತರಳಬಾಳು ಜಗದ್ಗುರು ಲಿಂ.ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ಎಲ್ಲಾ ವರ್ಗದ ಜನರನ್ನೂ ಪ್ರೀತಿಸುತ್ತಿದ್ದರು. ಅದರಲ್ಲೂ ರಂಗ ಭೂಮಿ ಬಗ್ಗೆ ವಿಶೇಷ ಒಲವು ಹೊಂದಿದ್ದರು. ನಾಟಕಕಾರರಾಗಿ, ನಿರ್ದೇಶಕರಾಗಿ, ಸಂಘಟಕರಾಗಿ ರಂಗಭೂಮಿ ಮಾಧ್ಯಮವನ್ನು ತತ್ವ ಪ್ರಚಾರಕ್ಕಾಗಿ ಸಮರ್ಥವಾಗಿ ಸದ್ಬಳಕೆ ಮಾಡಿಕೊಂಡರು ಎಂದು ಸ್ಮರಿಸಿದರು.

ಹನ್ನೆರಡನೇ ಶತಮಾನದಲ್ಲಿ ಶೋಷಿತ ವರ್ಗ ತಲೆ ಎತ್ತಿ ಬದುಕುವಂತೆ ಬಸವಣ್ಣನವರು ಮಾಡಿದ್ದರು. ಇಂದು ಮತ್ತೆ ಆ ಕೆಲಸವನ್ನು ಮಾಡಬೇಕೆಂಬ ಉತ್ಸಾಹ ಚಿತ್ರದ ನಿರ್ದೇಶಕರು ಹಾಗೂ ತಂಡದವರಲ್ಲಿದೆ. ದಲಿತ ಮಹಿಳೆಯೊಬ್ಬಳು ಹೇಗೆ ಶಿಕ್ಷಣ ಪಡೆದು ಸಮಾಜಲ್ಲಿ ತಲೆ ಎತ್ತಿ ಬದುಕುವ ವಾತಾವರಣ ನಿರ್ಮಾಣವಾಗುತ್ತದೆ. ಸಮಾಜ ಅವಳನ್ನು ಹೇಗೆ ಕಾಣುತ್ತದೆ? ಎಂಬ ವಿಚಾರಗಳನ್ನು ಸರಳವಾಗಿ ನಿರೂಪಿಸುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಈ ಕಿಚ್ಚು ಸಮಾಜದಲ್ಲಿನ ಎಲ್ಲಾ ರೀತಿಯ ಅನಿಷ್ಟಗಳನ್ನು ವಿರೋಧಿಸುವ ವಾತಾವರಣ ನಿರ್ಮಾಣವಾಗಿ ಸಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿ ಎಂದು ಆಶಿಸಿದರು.

ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷರೂ, ಹಿರಿಯ ರಂಗ ಸಂಘಟಕರೂ ಆದ ಶ್ರೀನಿವಾಸ ಜಿ.ಕಪ್ಪಣ್ಣ ಅವರು ವಚನ ಓದುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, 'ಉಳ್ಳವರು ಶಿವಾಲಯವ ಮಾಡುವರು' ಎನ್ನುವ ಹಾಗೆ ಇಂದು ಹಣ ಉಳ್ಳವರು ಮಲ್ಟಿ ಸ್ಟಾರ್ ಸಿನಿಮಾಗಳನ್ನು ಮಾಡುತ್ತಾರೆ. ಭಾಷೆ, ಸಂಸ್ಕೃತಿ ನಾಶ ಮಾಡುತ್ತಿದ್ದಾರೆ. ಹಣ ಇಲ್ಲದವರು ಸಮಾಜಕ್ಕೊಂದು ಸಂದೇಶ ಕೊಡಬೇಕೆಂಬ ಆದರ್ಶ ಇಟ್ಟುಕೊಂಡು ಸಿನಿಮಾ ಮಾಡುತ್ತಾರೆ. ಅಂತವರಲ್ಲಿ ನರೇಶ್ ಸಹ ಒಬ್ಬರು ಎಂದರು.

ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ವಿಭಾಗದ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಮಾತನಾಡುತ್ತಾ, ಬುದ್ಧ, ಬಸವ ಹಾಗೂ ಗಾಂಧೀಜಿ ಈ ದೇಶಕ್ಕೆ ದಾರಿದೀಪ. ನಮ್ಮ ಬದುಕನ್ನು ಸುಂದರವಾಗಿಸುವ ಇವರನ್ನು ಮತ್ತೆ ನೆನಪಿಸುವ ಕೆಲಸವನ್ನು ನಾಟಕಗಳು, ಸಿನಿಮಾಗಳು ಮಾಡುತ್ತಿವೆ ಎಂದರು.

ಕಳಬೇಡ, ಕೊಲಬೇಡ ಎಂದು ವಚನಗಳ ಮೂಲಕ ಸರಳವಾಗಿಯೇ ಜನರನ್ನು ತಿದ್ದುವ ಕೆಲಸವನ್ನು ಬಸವಣ್ಣ ಮಾಡಿದ್ದರು. ಇಂದು ಬಸವಣ್ಣನವರನ್ನೇ ಪ್ರಧಾನವಾಗಿಟ್ಟುಕೊಂಡು ಅವರ ತತ್ವ, ಸಿದ್ಧಾಂತಗಳನ್ನು ಸಿನಿಮಾ ಮೂಲಕ ತಿಳಿಸುವ ಕೆಲಸ ಮಾಡಲು ಹೊರಟಿರುವುದು ಉತ್ತಮ ಕೆಲಸ ಎಂದರು.

ನಿವೃತ್ತ ಪ್ರಾಚಾರ್ಯ ನಾ.ಲೋಕೇಶ್ ಒಡೆಯರ್ ಮಾತನಾಡುತ್ತಾ ಭ್ರಷ್ಟಾಚಾರ, ಜಾತೀಯತೆ ಇತರೆ ಅನಿಷ್ಟಗಳ ನಡುವೆ ಉಸಿರುಗಟ್ಟಿಸುವ ವಾತಾವರಣದಲ್ಲಿ ನಾವಿದ್ದೇವೆ. ಈ ಸಂದರ್ಭದಲ್ಲಿ 12ನೇ ಶತಮಾನದ ಶಿವಶರಣರ ಆದರ್ಶಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡಾಗ ಸಮ ಸಮಾಜ ಕಟ್ಟಲು ಸಾಧ್ಯ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಪ್ರೊ.ಎಸ್. ಹಾಲಪ್ಪ, ಫಾ. ಬಿ. ರಾಜಶೇಖರ್, ವಿಜಯಕುಮಾರ ಸೋನಾರೆ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಉಪಸ್ಥಿತರಿದ್ದರು.

ನಿರ್ದೇಶಕ ಡಿಂಗ್ರಿ ನರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಕೊನೆಯಲ್ಲಿ ವಂದಿಸಿದರು. ಯಶಾದಿನೇಶ್ ಸಂಗಡಿಗರು ವಚನ ಗೀತೆ ಹಾಡಿದರು.

### ಸಿನಿಮಾ ಶಕ್ತಿ ಶಾಲಿ ಭಾಷೆ: ಮಂಡ್ಯ ರಮೇಶ್

ಸಿನಿಮಾ ಸಮಾಜದಲ್ಲಿ ಶಕ್ತಿಶಾಲಿ ಭಾಷೆ. ಅಂತಹ ಸಿನಿಮಾದ ಮೂಲಕ ಹನ್ನೆರಡನೇ ಶತಮಾನದಲ್ಲಾದ ಕ್ರಾಂತಿಯ ವಿಚಾರಗಳು ಪ್ರಸ್ತುತ ದಿನಗಳಲ್ಲಿ ಎಷ್ಟು ಅಗತ್ಯ ಎಂಬುದನ್ನು ಹೇಳುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಕಲಾವಿದ ಮಂಡ್ಯ ರಮೇಶ್ ಹೇಳಿದರು.

'ಉದಕದೊಳಗಿನ ಕಿಚ್ಚು' ಸಿನಿಮಾದ ಪೋಸ್ಟರ್ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

40 ವರ್ಷ ರಂಗಭೂಮಿ ಹಾಗೂ 20 ವರ್ಷಗಳ ಸಿನಿಮಾ ಜಗತ್ತಿನ ಪಯಣದಲ್ಲಿ ಹಲವಾರು ಪಾತ್ರಗಳನ್ನು ಮಾಡಿದ್ದರೂ, ಈ ಚಿತ್ರದ ಅಭಿನಯದ ಬಗ್ಗೆ ಗೊಂದಲ, ಆತಂಕವುಂಟಾಗಿತ್ತು. ಆದರೆ ಸಾಣೇಹಳ್ಳಿ ಶ್ರೀಗಳ ಮಾರ್ಗದರ್ಶನವಿದೆ ಎಂದು ತಿಳಿದಾಗ ಸಂತೋಷವಾಯಿತು ಎಂದರು. ಇಂದು ಸಿನಿಮಾ ಮಾಧ್ಯಮಕ್ಕೆ ಯುವಕರ ಪಡೆ ನುಗ್ಗಿದೆ. ಹೃದಯದಲ್ಲಿ ಪ್ರೀತಿಯ ಕಿಚ್ಚು ಹಚ್ಚುತ್ತಿದೆ. ಇದು ಸವಾಲಿನ ಕೆಲಸವಾದರೂ ಪ್ರೀತಿಯಿಂದ ಮಾಡುತ್ತೇವೆ ಎಂದರು.

## ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಅ.8- ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇ ಕಾದ ಅರ್ಹತೆಗಳನ್ನು ಇಲಾಖೆಯ ವೆಬ್‌ಸೈಟ್ www. bcwd.karnataka.gov.in ಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 11 ಕೊನೆಯ ದಿನವಾಗಿದ್ದು, ದಾಖಲೆಗಳನ್ನು ಸಂಬಂಧಪಟ್ಟ ತಾಲ್ಲೂಕು ಹಿಂದುಳಿದ ವರ್ಗಗಳ ಕಛೇರಿಗೆ ಸಲ್ಲಿಸಬೇಕು.

## ಲಿಡ್‌ಕರ್ ಉತ್ಪನ್ನಗಳ ಮೇಲೆ ಭಾರೀ ರಿಯಾಯಿತಿ

ದಾವಣಗೆರೆ, ಅ.8- ನಗರದ ಎ.ವಿ.ಕೆ ಕಾಲೇಜ್ ರಸ್ತೆಯಲ್ಲಿರುವ ಲಿಡ್‌ಕರ್ ಮಾರಾಟ ಮಳಿಗೆಯಲ್ಲಿ ದಸರಾ ಹಬ್ಬದ ಪ್ರಯುಕ್ತ ಇದೇ ದಿನಾಂಕ 13 ರವರೆಗೆ ಚರ್ಮದ ಉತ್ಪನ್ನಗಳ ಮೇಲೆ ಶೇ.20 ರಿಯಾಯಿತಿ ಮಾರಾಟ ಇರುತ್ತದೆ.

ಮಾರಾಟ ಮಳಿಗೆಯಲ್ಲಿ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ಮಹಿಳೆಯರ ಪರ್ಸ್, ವ್ಯಾನಿಟಿ ಬ್ಯಾಗ್ ಲಭ್ಯವಿರುತ್ತವೆ. ವಿವರಕ್ಕೆ ಸಂಪರ್ಕಿಸಿ : 9741833307.

# 2ನೇ ದಿನವೂ ಮುಂದುವರಿದ ಐಟಿ ದಾಳಿ

**(1ನೇ ಪುಟದಿಂದ)** ನಿಗಮದ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಪ್ರಮುಖ ಗುತ್ತಿಗೆದಾರರ ದಾಸ್ತಾನು ಕೇಂದ್ರ, ಎತ್ತಿನ ಹೊಳಿ ಯೋಜನೆಗೆ ಸಂಬಂಧಿಸಿದಂತೆ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ಮಾಲೀಕರ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ಮುಂದುವರೆದಿದೆ.

ವಿಜಯೇಂದ್ರ ಅವರ ಆಪ್ತ ಅರವಿಂದ ಅವರ ವಸಂತನಗರ ಮನೆ ಮೇಲೆ ದಾಳಿ ನಡೆಸಿ, ದೊಡ್ಡ ಪ್ರಮಾಣದಲ್ಲಿ ಆಸ್ತಿಪಾಸ್ತಿ ವಶಪಡಿಸಿಕೊಂಡಿದ್ದಾರೆ.

ದಾಳಿ ವೇಳೆ ಕೋಟ್ಯಾಂತರ ರೂ. ನಗದು ದೊರೆತಿರುವುದಲ್ಲದೆ, ನಗದು ಎಣಿಸಲು ಬಳಸುತ್ತಿದ್ದ ಯಂತ್ರಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಾವಿರಾರು ಕೋಟಿ ರೂ. ಒಡೆಯ ಹಾಗೂ ಜಲಸಂಪನ್ಮೂಲ ಇಲಾಖೆಯಲ್ಲಿ ಗುತ್ತಿಗೆಗಳನ್ನು ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತಿದ್ದ ಡಿ.ವೈ. ಉಪ್ಪಾರ್ ಅವರ ನಿವಾಸ ಮತ್ತು ಕಚೇರಿ ಮೇಲೆ ದಾಳಿ ಮುಂದುವರೆದಿದೆ.

ಉಪ್ಪಾರ್ ಅವರು ಮಳೆಗಾಲದಲ್ಲೂ ಕಾಲುವೆಗಳ ನಿರ್ಮಾಣ ನಡೆಸಲು ಅಂದಿನ ಸರ್ಕಾರ ಅನುಮತಿ ನೀಡಿದ್ದಲ್ಲದೆ, ಇದಕ್ಕಾಗಿ ಸಾವಿರಾರು ಕೋಟಿ ರೂ. ಬಿಡುಗಡೆ ಮಾಡಿತ್ತು.

ದಾಳಿ ಒಟ್ಟಾರೆ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಸುತ್ತಲೇ ನಡೆದಿದ್ದು, ಅದರಲ್ಲೂ ವಿಜಯೇಂದ್ರ ಅವರ ಆಪ್ತರ ಮನೆಗಳ ಮೇಲೆ ಅಧಿಕಾರಿಗಳು ನಿರಂತರವಾಗಿ ದಾಳಿ ನಡೆಸಿ, ತನಿಖೆ ಮುಂದುವರೆಸಿದ್ದಾರೆ.

ಈ ಮಧ್ಯೆ ಆದಾಯ ತೆರಿಗೆ ಇಲಾಖೆಯ ದಾಳಿಗೊಳಗಾದ ಯಡಿಯೂರಪ್ಪ ಅವರ ಆಪ್ತ ಸಹಾಯಕ ಎಂ.ಆರ್. ಉಮೇಶ್ ಅವರನ್ನು ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ನಿಯೋಜನೆ ಮಾಡಿದ್ದ ಆದೇಶವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಿಂಪಡೆದಿದೆ.

ನಗರದ ಪುಟ್ಟೇನಹಳ್ಳಿ ಡಿಪೋದಲ್ಲಿ ಚಾಲಕ ಕಂ ನಿರ್ವಾಹಕ ಹುದ್ದೆಯಲ್ಲಿದ್ದ ಉಮೇಶ್ 2007 ರಿಂದಲೂ ನಿಯೋಜನೆ ಮೇಲೆ ಯಡಿಯೂರಪ್ಪ ಮತ್ತು ಅವರ ಕುಟುಂಬದ ಆಪ್ತ ಸಹಾಯಕರಾಗಿದ್ದರು.

ಸದ್ಯ ಮುಖ್ಯಮಂತ್ರಿ ಬೊಮ್ಮಾಯಿ ಸಚಿವಾಲಯದಲ್ಲಿ ಸಿಬ್ಬಂದಿಯಾಗಿ ಎರವಲು ಮೇಲೆ ಯಡಿಯೂರಪ್ಪ ಅವರ ಬಳಿ ಕೆಲಸ ಮಾಡುತ್ತಿದ್ದರು. ಉಮೇಶ್ ಚಾಲಕನಾಗಿದ್ದರೂ, ಆತನಿಗೆ ನೀರಾವರಿ ಇಲಾಖೆಯಲ್ಲಿ ಹಿರಿಯ ಇಂಜಿನಿಯರ್ ಬಳಸುತ್ತಿದ್ದ ಇನೋವಾ ಕಾರನ್ನು ಈತ ಬಳಕೆ ಮಾಡುತ್ತಿದ್ದ.

## ಸಾಯಿಬಾಬಾ ಮಂದಿರದಲ್ಲಿ ಪೂಜೆ ಸಲ್ಲಿಸಿದ ಶಾಸಕ ರವೀಂದ್ರನಾಥ್



ದಾವಣಗೆರೆ, ಅ.8 - ನಗರದ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸಾಯಿಬಾಬಾ ಮಂದಿರಕ್ಕೆ ನವರಾತ್ರಿ ಮೊದಲ ದಿನದಂದು ಭೇಟಿ ನೀಡಿದ್ದ ಹಿರಿಯ ಶಾಸಕ ಎಸ್.ಎ ರವೀಂದ್ರನಾಥ್ ಅವರು ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ರಾಜ್ಯದ ಜನರಿಗೆ ಆರೋಗ್ಯ, ಸುಖ, ಸಮೃದ್ಧಿಗಳನ್ನು ಕರುಣಿಸುವಂತೆ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಧನಂಜಯ್ ಕಡ್ಲೇಬಾಳು, ಪದ್ಮನಾಭ ಶೆಟ್ಟಿ, ಕಿರಣ್ ಸ್ವಾಮಿ, ಗಂಗಾಧರ್ ಬಾಬಾರ ಆಶೀರ್ವಾದ ಪಡೆದರು.

## ಹೊನ್ನಾಳಿ ಹಿರೇಕಲ್ಮಠದಲ್ಲಿ ಇಂದು ಧರ್ಮಸಭೆ

ಹಿರೇಕಲ್ಮಠದಲ್ಲಿ ಇಂದು ಸಂಜೆ 6.30 ಕ್ಕೆ ಧರ್ಮಸಭೆ ನಡೆಯಲಿದೆ. ಶ್ರೀ ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ, ಮುಷ್ಠೂರು ಶ್ರೀ ರುದ್ರಮುನಿ ಶಿವಾಚಾರ್ಯರು, ಚನ್ನಗಿರಿಯ ಶ್ರೀ ಡಾ. ಬಸವಜಯಚಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು.

ಅತಿಥಿಗಳಾಗಿ ಬಿ.ಎಸ್. ಯಡಿಯೂರಪ್ಪ, ಬಿ.ವೈ. ರಾಘವೇಂದ್ರ, ಎಂ.ಪಿ. ರೇಣುಕಾ ಚಾರ್ಯ, ರುದ್ರೇಗೌಡರು, ಆಯನೂರು ಮಂಜುನಾಥ್, ಬಿ.ವೈ. ವಿಜಯೇಂದ್ರ, ಬಿ.ಎಂ. ವಾಗೀಶಸ್ವಾಮಿ, ಕೆ. ಮುಕುಡಪ್ಪ, ಷಡಕ್ಷರಿ, ಗುರುಮೂರ್ತಿ, ಶ್ರೀಮತಿ ಗೀತಾ ರವೀಂದ್ರ, ರುದ್ರೇಶ್, ಸುಭಾಷ್ (ರಾಜಶೇಖರ್) ಆಗಮಿಸುವರು. ಡಾ. ವಾಣಿ ಕೋರಿ ಅವರು ಉಪನ್ಯಾಸ ನೀಡುವರು. ಪ್ರಶಾಂತ ಕೆ, ಕೆ.ವಿ. ಶ್ರೀಧರ, ಕೆ.ವಿ. ಮನೋಹರ, ರವಿ ತೋಂಟದಾರ್ಯ, ಹೆಚ್. ಬಿ. ಮೋಹನ್, ಚಂದ್ರಶೇಖರಪ್ಪ ಅವರುಗಳಿಗೆ ಗುರುರಕ್ಷೆ ನಡೆಯುವುದು.

## ಅಸ್ತಮಾಕ್ಕೆ ಔಷಧಿ ವಿತರಣೆ

ಚಿಕ್ಕಮಗಳೂರು, ಅ.8- ಇಲ್ಲಿನ ಮೆಸರ್ಸ್ ಶರ್ಮಾ ಆಯು ರ್ವೇದ ಭಂಡಾರ್‌ದಿಂದ ಇದೇ ದಿನಾಂಕ 19ರ ಮಂಗಳವಾರ ಅಸ್ತಮಾ ಕಾಯಿಲೆಗೆ ಔಷಧಿ ವಿತರಿಸ ಲಾಗುತ್ತದೆ ಎಂದು ವಿನೋದ್ ಶರ್ಮಾ (98844016766) ತಿಳಿಸಿದ್ದಾರೆ.

## ಹೊಳೆಸಿರಿಗೆರೆಯ ಚಾನಲ್ ಬಳಿ ಅಪರಿಚಿತ ವ್ಯಕ್ತಿಯ ಶವ ಪತ್ತೆ

ಮಲೇಬೆನ್ನೂರು, ಅ.8- ಹರಿಹರ ತಾಲೂಕು ಹೊಳೆಸಿರಿಗೆರೆಯ ಚಾನಲ್ ಹತ್ತಿರವಿರುವ 15ನೇ ಜೋನ್‌ನ ಭದ್ರಾ ಚಾನಲ್ ಬಳಿ ಯಾವುದೋ ಒಂದು ಮೃತ ದೇಹ ದಿನಾಂಕ 6 ರಂದು ಕಂಡುಬಂದಿರುತ್ತದೆ. ಆತ ಸುಮಾರು 40-45 ವರ್ಷದವನಾಗಿರುತ್ತಾನೆ. ಆ ವ್ಯಕ್ತಿಗೆ ತಲೆ ಇರುವುದಿಲ್ಲ, ದೇಹ ಊದಿಕೊಂಡಿದ್ದು, ಕೈ ಕಾಲಿನ ಬೆರಳುಗಳು ಇಲ್ಲ. ಆತನು ಕಂದು ಬಣ್ಣದ ನಿಕ್ಕರ್, ಕಡು ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದು, ಆತನ ಬಲಗೈ ಮೇಲೆ 'Mom' ಎಂದು ಹಚ್ಚೆ ಇರುತ್ತದೆ. ಮೃತನಿಗೆ ಸಂಬಂಧಪಟ್ಟವರು ಮಲೇಬೆನ್ನೂರು ಪೊಲೀಸ್ ಠಾಣೆ (08192-268758)ಗೆ ಅಥವಾ ಜಿಲ್ಲಾ ಕಂಟ್ರೋಲ್ ರೂಂ (08192-253100)ಗೆ ಸಂಪರ್ಕಿಸಬಹುದು.

# ಏತ ನೀರಾವರಿ ಯೋಜನೆಗಳು ನಿಗದಿತ ಅವಧಿಯಲ್ಲಿ ಕಾರ್ಯಾರಂಭ ಮಾಡಲಿ

**(1ನೇ ಪುಟದಿಂದ)** ಯಶಸ್ವಿಯಾಗಿದ್ದೇವೆ. ಇದೇ ಇಚ್ಛಾಶಕ್ತಿಯನ್ನು ಇತರೆಡಿಯಲ್ಲಿ ಪ್ರದರ್ಶಿಸಿ ಎಂದು ಹೇಳಿದರು.

ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಯಡಿ ಯಾವುದೇ ಕಾರಣಕ್ಕೂ ಸಾಸ್ವೆಹಳ್ಳಿ ಬಳಿಯಿಂದ ಎತ್ತುವ ನೀರನ್ನು ಸೂಳೆಕೆರೆಯ ನೀರಿನೊಂದಿಗೆ ಮಿಶ್ರ ಮಾಡಬೇಡಿ. ಒಂದು ವೇಳೆ ಮಿಶ್ರಣ ಮಾಡಿದ್ದೇ ಆದಲ್ಲಿ ಈಗಾಗಲೇ ಅನೇಕ ಕುಡಿಯುವ ನೀರಿನ ಯೋಜನೆಗಳ ಆಗರವಾಗಿರುವ ಶಾಂತಿಸಾಗರ ಕೋಲಾಹಲಕ್ಕೆ ಕಾರಣವಾಗಬಹುದು ಎಂದು ಸಲಹೆ ನೀಡಿದರು.

ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸಾಸ್ವೆಹಳ್ಳಿ ಬಳಿ ತುಂಗ ಭದ್ರಾ ನದಿಯಿಂದ ಎತ್ತುವ ನೀರನ್ನು ಶಾಂತಿಸಾಗರಕ್ಕೆ ಹೊಂದಿಕೊಂಡಂತೆ ಸುಮಾರು 10-12 ಎಕರೆ ಜಾಗದಲ್ಲಿ ಸಮತೋಲನಾ ಜಲಾಶಯ ನಿರ್ಮಾಣ ಮಾಡಿ ಅದಕ್ಕೆ ತುಂಬಿಸಿ, ನಂತರ ಅಲ್ಲಿಂದ ಮುಂದಿನ ಕೆರೆಗಳಿಗೆ ನೀರು ಹರಿಸಿ ಎಂದು ಶ್ರೀಗಳು ಸಲಹೆ ನೀಡಿದರು.

ಏತ ನೀರಾವರಿ ಯೋಜನೆಯಡಿ ಬಂದೊದಗಬಹುದಾದ ಎಲ್ಲಾ ಸಮಸ್ಯೆಗಳು ಭರಮಸಾಗರ ಏತ ನೀರಾವರಿ ಯೋಜನೆಯಡಿ ಬಂದೊದಗಿದ್ದವು. ಅವುಗಳನ್ನೆಲ್ಲಾ ಖುದ್ದು ನಾನೇ ಮುಂದೆ ನಿಂತು ಪರಿಹರಿಸಿದ್ದೇನೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಸಭೆಯ ಗಮನಕ್ಕೆ ತಂದರು.

ನೀವು ಸಮಸ್ಯೆಗಳೇನೇ ಇದ್ದರೂ ನನ್ನ ಗಮನಕ್ಕೆ ತನ್ನಿ. ಸಮಸ್ಯೆಗಳನ್ನೇ ಹೇಳದಿದ್ದರೆ ನೀವು ಕೆಲಸ ಮಾಡುತ್ತಿಲ್ಲ ಎಂದರ್ಥ. ಕೆಲಸ ಮಾಡಲು ಆಸಕ್ತಿ ಇಲ್ಲದವರು ಬೇರೆ ಕಡೆ ವರ್ಗಾವಣೆ ಮಾಡಿಸಿಕೊಳ್ಳಿ. ಹಗಲು-ರಾತ್ರಿ ಎನ್ನದೇ ಕೆಲಸ ಮಾಡುವವರು ಮಾತ್ರ ಇದರಲ್ಲಿ ತೊಡಗಿಸಿಕೊಳ್ಳಿ ಎಂದು ಹೇಳಿದರು.

ಶ್ರೀಗಳಿಗೆ ಏತ ನೀರಾವರಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ವಿಶೇಷ ವಿದ್ವತ್ತು ಇದೆ. ನಮಗೆ ಊಹಿಸಲು ಸಾಧ್ಯವಾಗದಂತಹ ಸಮಸ್ಯೆಗಳನ್ನು ಪೂಜ್ಯರೂ ಊಹಿಸಬಲ್ಲರು. ರವಿ ಕಾಣದ್ದನ್ನು ಕವಿ ಕಂಡ ಎನ್ನುವ ರೀತಿ ಪೂಜ್ಯರು ಕವಿಗಳಿದ್ದ ಹಾಗೆ. ಅವರ ಮಾರ್ಗದರ್ಶನದಲ್ಲಿ ನಾವು ಮುಂದೆ ಸಾಗೋಣ ಎಂದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ನೀವು ನಮಗೆ ತಿಳಿಸಿದ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸಿಕೊಟ್ಟಿದ್ದೇವೆ. ರೈಲ್ವೆ ಲೈನ್ ಕ್ರಾಸಿಂಗ್ ಅಥವಾ ಬೆಸ್ಕಾಂ ನ ಹೈಟೆನ್ಷನ್ ಲೈನ್ ಕೆಳಗೆ ಪೈಪ್ ಲೈನ್ ಹಾಕಲು ಅನುಮತಿ ಯಂತಹ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿದ್ದೇವೆ. ಇಂತಹ ಯಾವುದೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ಅಥವಾ ಆಯಾ ಭಾಗದ ಶಾಸಕರುಗಳ ಗಮನಕ್ಕೆ ತಂದರೆ ಹೆಚ್ಚಿನ ಕಾಳಜಿ ವಹಿಸಿ ಪರಿಹರಿಸುತ್ತಾರೆ ಎಂದರು.

ಶಾಸಕರಾದ ಮಾಡಾಳ್ ವಿರುಪಾಕ್ಷಪ್ಪ ಮಾತನಾಡಿ, ಅನೇಕ ಕಡೆ ಗ್ರಾಮಸ್ಥರ ಹಾಗೂ ರೈತರುಗಳ ಅಡಚಣೆಯನ್ನು ನಾನು ಪರಿಹರಿಸಿದ್ದೇನೆ ಎಂದರು.

ಶಾಸಕರುಗಳಾದ ಎಸ್.ವಿ.ರಾಮಚಂದ್ರ, ಪ್ರೊ. ಲಿಂಗಣ್ಣ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ಕರ್ನಾಟಕ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಶಿವಾನಂದ ಬಣಕಾರ್, ಅಧೀಕ್ಷಕ ಅಭಿಯಂತರ ರಮೇಶ್, ಕೆ.ಪಿ.ಟಿ.ಸಿ.ಎಲ್. ಅಧೀಕ್ಷಕ ಅಭಿಯಂತರರಾದ ಸುಭಾಷ್ಚಂದ್ರ, ಕಾರ್ಯಪಾಲಕ ಅಭಿಯಂತರರುಗಳಾದ ಮಲ್ಲಪ್ಪ, ಸುರೇಶ್, ದಾವಣಗೆರೆಯ ಶಿವಸೈನ್ಯ ಯುವಕರ ಸಂಘದ ಅಧ್ಯಕ್ಷ ಶಶಿಧರ ಹೆಮ್ಮನಬೇತೂರು ಸೇರಿದಂತೆ ಅನೇಕ ಅಧಿಕಾರಿಗಳು ಸಭೆಯಲ್ಲಿದ್ದರು.

# ಐಟಿಐ ತರಬೇತಿದಾರರ ಪರೀಕ್ಷೆ ರದ್ದತಿಗೆ ಎಐಡಿವೈಓ ಖಂಡನೆ




ದಾವಣಗೆರೆ, ಅ.8- ಐಟಿಐ ತರಬೇತಿದಾರರ ಪರೀಕ್ಷೆಯನ್ನು ಏಕಾಏಕಿ ರದ್ದು ಮಾಡಿರುವ ಕ್ರಮವನ್ನು ಖಂಡಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ ಜಿಲ್ಲಾ ಸಮಿತಿಯಿಂದ ನಗರದ ಜಯದೇವ ವೃತ್ತದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಪರೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿಗಳ ಮುಖಾಂತರ ಉದ್ಯೋಗ ಮತ್ತು ತರಬೇತಿ ಇಲಾಖೆಯ ಪರೀಕ್ಷಾ ಸಮನ್ವಯಾಧಿಕಾರಿ ಅವರಿಗೆ ಪ್ರತಿಭಟನಾ ನಿರತರು ಮನವಿ ಸಲ್ಲಿಸಿದರು.

ಅಕ್ಟೋಬರ್ 7 ಮತ್ತು 8ರಂದು ನಿಗದಿಯಾಗಿದ್ದ ಐಟಿಐ ಪೂರಕ ಸಿಬಿಟಿ ಪರೀಕ್ಷೆಗಳನ್ನು ಏಕಾಏಕಿ ತಾಂತ್ರಿಕ ಕಾರಣಗಳನ್ನು ನೀಡಿ ರದ್ದುಪಡಿಸಲಾಗಿದೆ. ಇದರಿಂದಾಗಿ ಪರೀಕ್ಷೆ ಬರೆಯಲು ಸಜ್ಜಾಗಿದ್ದ ಐಟಿಐ ತರಬೇತಿದಾರರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಎಐಡಿವೈಓ ಮುಖಂಡ ಪರಶುರಾಮ್ ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ದಿನಾಂಕವನ್ನು ಇಲಾಖೆಯ ಅನುಮೋದನೆಯ ನಂತರ ಪ್ರಕಟಿಸುವುದಾಗಿ ಪರೀಕ್ಷೆ ನಡೆಸುತ್ತಿರುವ ಏಜೆನ್ಸಿಯವರು ತಿಳಿಸಿದ್ದಾರೆ.

ಇದುವರೆಗೆ ಇಲಾಖೆಯಿಂದ ಪರೀಕ್ಷಾರ್ಥಿಗಳಿಗೆ ಯಾವುದೇ ಮಾಹಿತಿ ಬಂದಿಲ್ಲ. ಏಕಾಏಕಿ ಪರೀಕ್ಷೆ ರದ್ದುಗೊಳಿಸಿರುವುದು, ಹಲವಾರು ದಿನಗಳ ಕಾಲ ತಯಾರಿ ನಡೆಸಿ ಪರೀಕ್ಷೆ ಬರೆಯಲು ಸಜ್ಜಾಗಿ ದೂರದ ಊರುಗಳಿಂದ ಬಂದಿರುವ ತರಬೇತಿದಾರರನ್ನು ಸಂಕಷ್ಟಕ್ಕೆ ಈಡು ಮಾಡಿದೆ ಎಂದು ಆಕ್ಷೇಪಿಸಿದರು.

ಕೂಡಲೇ ರದ್ದಾಗಿರುವ ಪೂರಕ ಪರೀಕ್ಷೆಗಳ ದಿನಾಂಕವನ್ನು ನಿಗದಿ ಮಾಡಿ ಶೀಘ್ರದಲ್ಲಿ ಪರೀಕ್ಷೆ ನಡೆಸಿ ಫಲಿತಾಂಶ ನೀಡಲು ಇಲಾಖೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಅನಿಲ್ ಕುಮಾರ್, ಗುರು, ಐಟಿಐ ವಿದ್ಯಾರ್ಥಿಗಳಾದ ಅರುಣ್, ಸಂತೋಷ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಶಿಕ್ಷಣವೇ ಮಕ್ಕಳ ಅಭಿವೃದ್ಧಿಗೆ ಮೂಲ ಮಂತ್ರ

ದಾವಣಗೆರೆ, ಅ.8- ಗಾಂಧಿ ಜಯಂತಿ ಅಂಗವಾಗಿ ನಿಟುವಳ್ಳಿಯ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು ಜರುಗಿದವು.

ಹಿರಿಯ ಕನ್ನಡ ವಿದ್ವಾಂಸ ಬೂಸ್ನೂರು ಪ್ರಕಾಶ್ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಗುರ್ತಿಸಿ, ವಿದ್ಯಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಕ್ಕಳ ಲೋಕದ ಸಂಸ್ಥಾಪಕ ಅಧ್ಯಕ್ಷ ಕೆ.ಎನ್. ಸ್ವಾಮಿ ಪ್ರಕಾಶ್ ಅವರನ್ನು ಸಮಿತಿ ವತಿಯಿಂದ ಗೌರವಿಸಿದರು.

ನಂತರ ಮಾತನಾಡಿದ ಬೂಸ್ನೂರ್ ಪ್ರಕಾಶ್, ಶಿಕ್ಷಣವೇ ಮಕ್ಕಳ ಅಭಿವೃದ್ಧಿಗೆ ಮೂಲ ಮಂತ್ರವೆಂದರು. ಗಾಂಧೀಜಿಯವರ ಖಾದಿ ಚಳುವಳಿಯಲ್ಲಿ ಹರಿಹರದ ಗುಂಡೂರಾಯರು, ದಾವಣಗೆರೆಯ ಕಾಸಲ್ ಶ್ರೀನಿವಾಸ್ ಶ್ರೇಷ್ಠಿ, ಖಾದಿ ಸಿದ್ದಪ್ಪ, ಪುರಾಣಿಕ ಮಠದ ವೀರಬಸಯ್ಯನವರು, ಹರಿಹರದ ಕೆ.ಎಂ. ಅಣ್ಣಾಜಿ ಅವರ ಸೇವೆಯನ್ನು ಸ್ಮರಿಸಿದರು.

ಜ್ಞಾನದೀಪ ಪಬ್ಲಿಕ್ ಶಾಲೆಯ ಸ್ಥಾಪಕ ಬಸವರಾಜಪ್ಪ ಗಾಂಧೀಜಿ ಕುರಿತು ಭಾಷಣ ಮಾಡಿದ ಡಿ. ಅರ್ಚನಾ, ಪ್ರಜ್ವಲ್, ಸರಿನಿಯಾ, ರಾಜೇಶ್, ರಜಾಕ್, ಮನೀಷಾ, ಪೃಥ್ವಿರಾಜ್ ಅವರಿಗೆ ಮಾರ್ಗದರ್ಶನ ಮಾಡಿದರು. ಮಕ್ಕಳ ಲೋಕದ ನಿರ್ದೇಶಕರಾದ ರುಕ್ಮಾಬಾಯಿ ಭಜನೆ ಹೇಳಿಕೊಟ್ಟರು. ಪ್ರಾಚಾರ್ಯರು, ಜಾನಪದ ಅಕಾಡೆಮಿಯ ಸದಸ್ಯೆ ರುದ್ರಾಕ್ಷಿ ಬಾಯಿ ಹಾಗೂ ಮಕ್ಕಳ ಲೋಕದ ಅಧ್ಯಕ್ಷ ಎನ್. ಪುಟ್ಟಾನಾಯ್ಕ ಕಾರ್ಯಕ್ರಮ ಸಂಯೋಜಿಸಿದ್ದರು.

# ಕಾಲೇಜು ಕಟ್ಟಡದ ಕಳಪೆ ಕಾಮಗಾರಿಗೆ ಆಕ್ರೋಶ

**ಜಗಳೂರಿನಲ್ಲಿ ಎಸ್ಎಫ್ಐ ಪ್ರತಿಭಟನೆ**



ಜಗಳೂರು, ಅ.8- ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡದ ಕಳಪೆ ಕಾಮಗಾರಿ ಹಾಗೂ ವಿದ್ಯಾರ್ಥಿನಿಯರಿಗೆ ಶೌಚಾಲಯ ವ್ಯವಸ್ಥೆ ಇಲ್ಲದಿರುವುದನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್ಎಫ್ಐ ನೇತೃತ್ವದಲ್ಲಿ ತಾಲ್ಲೂಕು ಕಚೇರಿ ಮುಂಭಾಗ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ಶಾಸಕ ಎಸ್.ವಿ. ರಾಮಚಂದ್ರಪ್ಪ ಹಾಗೂ ಪಂಚಾಯತ್ ರಾಜ್ ಇಲಾಖೆಯ ಇಂಜಿನಿಯರ್ ಶಿವಕುಮಾರ್‌ಗೆ ಮನವಿ ಸಲ್ಲಿಸಿದರು.

ಮುಖಂಡರಾದ ಮಹಾಲಿಂಗಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಅತಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿರುವ ಮತ್ತು ಪ್ರತಿಷ್ಠಿತ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಸಕರು 96 ಲಕ್ಷ ರೂ. ಮೊತ್ತದಲ್ಲಿ 2018ರಲ್ಲಿ ಮೂರು ಕೊಠಡಿಗಳು, ಎರಡು ವಿಜ್ಞಾನ ಪ್ರಯೋಗಾಲಯ ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿನಿಯರಿಗಾಗಿ ಶೌಚಾಲಯ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸಲಾಗಿದೆ.

ಕಟ್ಟಡ ಕಾಮಗಾರಿ ಮುಕ್ತಾಯವಾಗಿದ್ದು, ಅತ್ಯಂತ ಕಳಪೆ ಮಟ್ಟದ ಕಾಮಗಾರಿಯನ್ನು ಮಾಡಿದ್ದಾರೆ. ಅಲ್ಲದೆ ಕಟ್ಟಡ ಕಾಮಗಾರಿ ಪೂರ್ಣಗೊಂಡರೂ, ಬಳಕೆ ಮಾಡಲು ಅವಕಾಶ ನೀಡದಿರುವುದು ವಿದ್ಯಾರ್ಥಿಗಳಿಗೆ ಅನುಮಾನಕ್ಕೆ ಆಸ್ಪದವಾಗಿದೆ. ಸುಮಾರು 1,500 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಕಾಲೇಜಿನಲ್ಲಿ ಕೇವಲ ಒಂದು ಶೌಚಾಲಯವಿದ್ದು, ವಿದ್ಯಾರ್ಥಿನಿಯರು ತರಗತಿ ಚಟುವಟಿಕೆ ತೊರೆದು ಸಾಲುಗಟ್ಟಿ ನಿಲ್ಲಬೇಕಿದೆ.

ಶಾಸಕರು ಇತ್ತ ಗಮನಹರಿಸಿ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಈಗಾಗಲೇ ನಿರ್ಮಾಣವಾಗಿರುವ ಕಳಪೆ ಕಾಮಗಾರಿಯನ್ನು ಸರಿಪಡಿಸಬೇಕು. ಇಲ್ಲವಾದರೆ ಎಸ್ಎಫ್ಐ ನೇತೃತ್ವದಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಮಹಾಲಿಂಗಪ್ಪ ಎಚ್ಚರಿಕೆ ನೀಡಿದರು

ಈ ಸಂದರ್ಭದಲ್ಲಿ ವಕೀಲ ಆರ್. ಓಬಳೇಶ್ , ಎಸ್ಎಫ್ಐ ಜಿಲ್ಲಾ ಸಂಚಾಲಕ ಅನಂತರಾಜ್, ತಾಲ್ಲೂಕು ಅಧ್ಯಕ್ಷ ತಮಲೇಹಳ್ಳಿ ಅಂಜಿನಪ್ಪ, ಪದಾಧಿಕಾರಿಗಳಾದ ಹೊನ್ನಮರಡಿ ರಾಜು, ಅಶ್ವಿನಿ, ತೇಜಸ್ವಿನಿ, ಅಂಬಿಕಾ, ಮಧು ಕುಮಾರ್, ಶಿವರಾಜ್, ಮಹಾಲಕ್ಷ್ಮಿ ಇನ್ನಿತರರು ಹಾಜರಿದ್ದರು.

# ಹರಿಹರದ ಶ್ರೀ ಗ್ರಾಮ ದೇವತೆಗೆ ಉಚ್ಚಂಗೆಮ್ಮ ಅಲಂಕಾರ



ಹರಿಹರ, ಅ.8- ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮ ದೇವತೆ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ನಿಮಿತ್ತ ದೇವಿಗೆ ಉಚ್ಚಂಗೆಮ್ಮ ದೇವಿಯ ಅಲಂಕಾರ ಮಾಡಿ, ಕುಂಕುಮಾರ್ಚನೆ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಲಾಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಪೂಜಾರ್ ಈರಣ್ಣ, ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಖಜಾಂಚಿ ಸುರೇಶ್ ಚಂದಾಪೂರ್, ಗೌರವಾಧ್ಯಕ್ಷ ಪಾಲಾಕ್ಷಪ್ಪ ಮಜ್ಜಿಗೆ, ಬೆಣ್ಣೆ ರೇವಣಸಿದ್ದಪ್ಪ, ಗುತ್ಯಪ್ಪ, ಚಿದಾನಂದ ಕಂಚಿಕೇರಿ, ವೀರಣ್ಣ ಹಾವನೂರು, ಪರಮೇಶ್ವರಪ್ಪ ನೀಲಗುಂದ, ಚಂದ್ರಪ್ಪ ಮಜ್ಜಿಗೆ, ಶಿವಾನಂದ ದಾವಣಗೆರೆ, ಬೆಣ್ಣೆ ಸಿದ್ದಪ್ಪ, ಅರ್ಚಕ ನಾಗರಾಜ್ ಇನ್ನಿತರರಿದ್ದರು.

# ಸೇವಾಲಾಲ್ ಮರಿಯಮ್ಮ ಮೂರ್ತಿ ಪ್ರತಿಷ್ಠಾಪನೆ



**ಹರಪನಹಳ್ಳಿ**

ಹರಪನಹಳ್ಳಿ, ಅ.8- ತಾಲ್ಲೂಕಿನ ಕಂಚಿಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಕೇರಿ ಕೋಡಿ ತಾಂಡಾದಲ್ಲಿ ಸೇವಾಲಾಲ್ ಮರಿಯಮ್ಮ ದೇವರ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಾಂತೇಶ್ ಚರಂತಿಮಠ, ಬಳ್ಳಾರಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯ ಶಶಿಧರ್ ಪೂಜಾರ್, ಜಿಲ್ಲಾ ಪಂಚಾಯ್ತಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ, ಕಾಂಗ್ರೆಸ್ ಯುವ ಮುಖಂಡ ಬೇವಿನಹಳ್ಳಿ ಎಂ.ಬಿ. ಯಶವಂತ್ ಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಪಿ. ಎಲ್. ಪೋಮ್ಯಾ ನಾಯ್ಕ್, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಕೆ. ಹಾಲೇಶ್, ಟಿಎಪಿಸಿಎಂಎಸ್ ನಿರ್ದೇಶಕ ತಿಮ್ಮಾನಾಯ್ಕ, ತಾವರ್ಯಾನಾಯ್ಕ್, ಕೊಟ್ರೇಶ್ ಸ್ವಾಮಿ, ಎಚ್. ರಾಜಪ್ಪ, ಹಳ್ಳಿಕೇರಿ ಕೋಡಿ ತಾಂಡಾದ ಮುಖಂಡರಾದ ದೇವ್ಲ ನಾಯ್ಕ, ರೇವ್ಯಾ ನಾಯ್ಕ, ರಾಜ ನಾಯ್ಕ, ವಿಜಯ ನಾಯ್ಕ, ಶೇಖರ್ ನಾಯ್ಕ, ಭೋಜ್ಯನಾಯ್ಕ, ರಾಮನಾಯ್ಕ, ಧನ್ಯನಾಯ್ಕ, ರವಿನಾಯ್ಕ, ಹನುಮಾನಾಯ್ಕ ಇನ್ನಿತರರಿದ್ದರು.

# ಅಂತರಂಗದ ಶತ್ರುಗಳ ಮೇಲೆ ವಿಜಯ ಸಾಧಿಸಬೇಕಿದೆ : ಓಂಕಾರ ಶಿವಾಚಾರ್ಯ ಶ್ರೀ



ದಾವಣಗೆರೆ, ಅ.8-ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ವಿಶ್ವ ಹಿಂದೂ ಪರಿಷದ್ ಹಾಗೂ ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿ ವತಿಯಿಂದ ನಿನ್ನೆ ದುರ್ಗಾದೇವಿ ವಿಗ್ರಹ, ಘಟ ಸ್ಥಾಪನೆ ನೆರವೇರಿತು.

ಇದಕ್ಕೂ ಮುನ್ನ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ದಿಂದ ಬೀರಲಿಂಗೇಶ್ವರ ದೇವಸ್ಥಾನದ ಆವರಣದವರೆಗೆ ಶ್ರೀ ದುರ್ಗಾದೇವಿ ವಿಗ್ರಹವನ್ನು ಜಾನಪದ ಕಲಾ ತಂಡ ಗಳೊಂದಿಗೆ ನಡೆದ ಮೆರವಣಿಗೆಯೊಂದಿಗೆ ತರಲಾಯಿತು.

ಘಟಸ್ಥಾಪನೆಯ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶೀ ರ್ವಚನ ನೀಡುತ್ತಾ, ದುಷ್ಟ ಶಕ್ತಿಗಳ ದಮನದ ಸಂಕೇತವೇ ದಸರಾ ಹಬ್ಬ ಎಂದು ವಿಶ್ಲೇಷಿಸಿದರು.

ಲಲಿತಕಲೆಗಳೂ ಸೇರಿ ನಮ್ಮ ಸಂಸ್ಕೃತಿ, ಸಾಹಿತ್ಯದ ಅಭಿವ್ಯಕ್ತಿಗೆ ಈ ನಾಡಹಬ್ಬವು ವೇದಿಕೆ ಒದಗಿಸುತ್ತದೆ. ಶಕ್ತಿ ಮಾತೆಯಾದ ನವದುರ್ಗೆಯನ್ನು ಭಕ್ತರ ಮನೆ, ಮಠ, ಮಂದಿರಗಳಲ್ಲಿ ಆರಾಧಿಸಲಾಗುತ್ತದೆ ಎಂದು ಹೇಳಿದರು.

ಶ್ರದ್ಧಾ-ಭಕ್ತಿಯಿಂದ ಆಚರಿಸುವ ವಿಜಯದಶಮಿಯು ಕರ್ನಾಟಕದಲ್ಲಿ ರಾಜ-ಮಹಾರಾಜರಿಂದ ವೈಭವಯುತವಾಗಿ ಆಚರಿಸಲ್ಪಟ್ಟು ನಾಡಹಬ್ಬವೆಂದೇ ಹೆಸರಾಗಿರುವುದು ಇದರ ಮಹತ್ವಕ್ಕೆ ಸಾಕ್ಷಿಯಾಗಿದೆ ಎಂದರು.


ಮನುಷ್ಯನಲ್ಲಿರುವ ಅಂತರಂಗದ ಶತ್ರುಗಳ ಮೇಲೆ ಮೊದಲು ವಿಜಯ ಸಾಧಿಸಬೇಕಿದೆ. ದುಷ್ಟ ಶಕ್ತಿಗಳ ಮೇಲೆ ಜಯ ಸಾಧಿಸಿದ ದುರ್ಗಾದೇವಿಯನ್ನು ನವರಾತ್ರಿ ಸಂದರ್ಭದಲ್ಲಿ 9 ದಿನಗಳ ಕಾಲ ಪೂಜಿಸುವುದೂ ಕೂಡ ಇದೇ ಆಶಯ ಹೊಂದಿದೆ ಎಂದು ಹೇಳಿದರು.

ದೇಶದ ಗಡಿಯಲ್ಲಿ ಹಿಂಸಾತ್ಮಕ ಚಟುವಟಿಕೆಗಳು ನಡೆಯುತ್ತಿದ್ದು, ಅಂತಹ ರಾಕ್ಷಸಿ ಪ್ರವೃತ್ತಿಗಳ ಅಂತ್ಯವಾಗಬೇಕಿದೆ. ದುಷ್ಟ ಶಕ್ತಿಗಳ ನಿಗ್ರಹವಾಗಿ ಶಾಂತಿ ನೆಲೆಸಬೇಕಿದೆ. ನಮ್ಮ ಕಷ್ಟಗಳನ್ನು ನೀಗಿಸಿ ಸುಭಿಕ್ಷೆಯನ್ನು ಕರುಣಿಸುವಂತೆ ನಾವೆಲ್ಲರೂ ದೇವಿಯನ್ನು ಪ್ರಾರ್ಥಿಸೋಣ ಎಂದರು. ಪುರಾಣ ಕಾಲದಲ್ಲಿ ದೇವಿಯು ರಾಕ್ಷಸರ ಸಂಹಾರ ಮಾಡಿದ ಬಗ್ಗೆ ಕೇಳಿದ್ದೇವೆ. ಇಂದಿಗೂ ಜಗತ್ತಿನಲ್ಲಿ ಅಗೋಚರ ಶಕ್ತಿಯಾಗಿ ದೇವಿಯು ನಮ್ಮನ್ನು ಕಾಯುತ್ತಿದ್ದಾಳೆ. ದೇವಿಯ ಅನುಗ್ರಹದಿಂದ ಕೊರೊನಾ ಆತಂಕ ದೂರವಾಗಲಿ ಎಂದು ಆಶಿಸಿದರು.

ಪಾಲಿಕೆ ಮೇಯರ್ ಎಸ್.ಟಿ.ವೀರೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸಮಿತಿ ಸಂಚಾಲಕ ಸತೀಶ ಪೂಜಾರಿ, ಸಹ ಸಂಚಾಲಕರಾದ ಎನ್. ರಾಜಶೇಖರ, ರಾಜು ಬೇಕರಿ, ಸದಸ್ಯರಾದ ಕೆ.ಬಿ. ಶಂಕರನಾರಾಯಣ, ವೈ.ಮಲ್ಲೇಶ್, ತಿಪ್ಪೇಸ್ವಾಮಿ, ಪ್ರಹ್ಲಾದ್ ತೇಲ್ಕರ್, ವಿನಾಯಕ ರಾನಡೆ, ಎಸ್. ಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ದುರ್ಗಾದೇವಿ ಮೂರ್ತಿ ಮೆರವಣಿಗೆಯಲ್ಲಿ ಪಾಲಿಕೆ ಸದಸ್ಯರಾದ ವೀರೇಶ್ ಪೈಲ್ವಾನ್, ಉಮಾ ಪ್ರಕಾಶ್ ಇತರರು ಭಾಗವಹಿಸಿದ್ದರು.

# 21ರಿಂದ 3 ದಿನ ಸರ್ಕಾರಿ ನೌಕರರ ಕ್ರೀಡಾಕೂಟ



ದಾವಣಗೆರೆ, ಅ.8- ಜಿಲ್ಲೆಯಲ್ಲಿ ಇದೇ ದಿನಾಂಕ 21, 22 ಮತ್ತು 23 ರಂದು ನಡೆಯಲಿರುವ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಐತಿಹಾಸಿಕ ಮೈಲಿಗಲ್ಲಾಗಲಿದ್ದು, ಕ್ರೀಡಾಕೂಟಕ್ಕೆ ಆಗಮಿಸುವ 8 ಸಾವಿರ ಕ್ರೀಡಾಪಟುಗಳಿಗೆ ಎಲ್ಲಾ ರೀತಿಯ ಸುಸಜ್ಜಿತ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ-2021 ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯಮಟ್ಟದ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಿಕೊಡಲು ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸ್ವಯಂ ಪ್ರೇರಿತರಾಗಿ ಮುಂದೆ ಬಂದಿದ್ದು ಸಾರಿಗೆ, ವಸತಿ, ಊಟೋಪಚಾರ, ಸ್ವಚ್ಛತೆ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿ ಮಾತನಾಡಿ, ಈ ಕ್ರೀಡಾಕೂಟದಲ್ಲಿ 5,600 ಪುರುಷರು, 2,600 ಮಹಿಳೆಯರು ಸೇರಿದಂತೆ ಒಟ್ಟು 8,200 ಕ್ರೀಡಾಪಟುಗಳು ಪಾಲ್ಗೊಳಲಿದ್ದು, 53 ಇವೆಂಟ್ಸ್‌ಗಳನ್ನು ನಡೆಸಲಾಗುತ್ತದೆ. ಕಾರ್ಯಕ್ರಮ ಯಶಸ್ವಿಗೊಳಿಸಲು 18 ಸಮಿತಿಗಳನ್ನು ರಚಿಸಲಾಗಿದೆ ಎಂದು ಅವರು ವಿವರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿಗಳು ಹಾಗೂ ವಿವಿಧ ಇಲಾಖೆಗಳ ಸಚಿವರು ನೆರವೇರಿಸಿಕೊಡಲಿದ್ದಾರೆ.

ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಎಎಸ್‌ಪಿ ಕನಿಖಾ ಶುಕ್ರವಾಲ್, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ತಹಶೀಲ್ದಾರ್ ಗಿರೀಶ್, ದೂಡಾ ಆಯುಕ್ತ ಕುಮಾರಸ್ವಾಮಿ, ಡಿಹೆಚ್ಓ ಡಾ.ನಾಗರಾಜ್, ಜಿಲ್ಲಾ ಸರ್ಜನ್ ಜಯಪ್ರಕಾಶ್, ರಾಜ್ಯ ಸರ್ಕಾರಿ ನೌಕರರ ಸಂಘದ ಉಪಕಾರ್ಯದರ್ಶಿ ಆನಂದ್ ಇನ್ನಿರರಿದ್ದರು.

## ಪುಸ್ತಕ ಬಹುಮಾನ : ಜಾನಪದ ಕೃತಿಗಳ ಆಹ್ವಾನ

ದಾವಣಗೆರೆ, ಅ.8- ಕರ್ನಾಟಕ ಜಾನಪದ ಅಕಾಡೆಮಿಯು 2020 ರ ಜನವರಿಯಿಂದ ಡಿಸೆಂಬರ್ 31 ರವರೆಗೆ ಪ್ರಥಮ ಆವೃತ್ತಿಯಲ್ಲಿ ಮುದ್ರಣಗೊಂಡಿರುವ ಕನಿಷ್ಠ 150 ಪುಟಗಳಿಗೂ ಮೇಲ್ಪಟ್ಟ ಮಿತಿಯಲ್ಲಿರುವ ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ, ವಿಮರ್ಶೆ, ಸಂಶೋಧನೆ, ಜನಪದ ಸಂಕೀರ್ಣ ಈ 4 ಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳಿಗೆ ಬಹುಮಾನ ನೀಡುವ ಯೋಜನೆಯಡಿಯಲ್ಲಿ ಜಾನಪದ ಕೃತಿಗಳನ್ನು ಪುಸ್ತಕ ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು, ಪ್ರಕಾಶಕರು, ಸಂಪಾದಕರು, 4 ಕೃತಿಗಳನ್ನು ದ್ವಿಪ್ರತಿ ಬಿಲ್ಲಿನೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002 ಇಲ್ಲಿಗೆ ಇದೇ ದಿನಾಂಕ 11 ರೊಳಗೆ ಖುದ್ದಾಗಿ, ಕೊರಿಯರ್ ಅಥವಾ ಅಂಚೆ ಮೂಲಕ ಕಳುಹಿಸುವಂತೆ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ತಿಳಿಸಿದ್ದಾರೆ.

**ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ., ದಾವಣಗೆರೆ.**

DAVANAGERE URBAN CO-OPERATIVE BANK LTD.

**60ನೇ ವಾರ್ಷಿಕ ಮಹಾಸಭೆಯ ನೋಟೀಸು**

ಬ್ಯಾಂಕಿನ **2020-21ನೇ ಸಾಲಿನ ವಾರ್ಷಿಕ ಮಹಾಸಭೆಯ** ವರ್ಚ್ಯುವಲ್ ಮೀಟಿಂಗನ್ನು ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ **ದಿನಾಂಕ : 23.10.2021ನೇ ಶನಿವಾರದಂದು ಬೆಳಿಗ್ಗೆ 11.30 ಘಂಟೆಗೆ** ಕರೆಯಲಾಗಿದೆ. ಮಾನ್ಯ ಸದಸ್ಯರು ಬ್ಯಾಂಕಿನಲ್ಲಿ ನೋಂದಾಯಿಸಿರುವ ತಮ್ಮ ಮೊಬೈಲ್ ಸಂಖ್ಯೆಗೆ ಬ್ಯಾಂಕಿನಿಂದ ಕಳುಹಿಸಿರುವ ಲಿಂಕನ್ನು ಸಕಾಲಕ್ಕೆ ಬಳಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವರ್ಚ್ಯುವಲ್ ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

**ಸಭೆಯ ಕಾರ್ಯಸೂಚಿ :**

1) ಪ್ರಾರ್ಥನೆ
2) ದಿನಾಂಕ 12.12.2020 ರಂದು ನಡೆದ 59ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
3) ಕಾರ್ಯನಿರ್ವಾಹಕ ಮಂಡಳಿಯವರು ತಯಾರಿಸಿರುವ 60ನೇ ವಾರ್ಷಿಕ ವರದಿಯನ್ನು (2020-21) ಪರಿಶೀಲಿಸುವುದು.
4) ದಿನಾಂಕ : 31.03.2021ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆ ಪರಿಶೀಲನೆ ಮತ್ತು 2020-21ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಗೆ ಕಾರ್ಯನಿರ್ವಾಹಕ ಮಂಡಳಿಯು ತಯಾರಿಸಿದ ಅನುಪಾಲನಾ ವರದಿಯ ಪರಿಗಣನೆ.
5) 2020-21ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2021-22ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
6) 2020-21ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
7) ನಿರ್ದೇಶಕ ಮಂಡಳಿಯು 2021-22ನೇ ಸಾಲಿಗೆ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
8) 2021-22ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.
9) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಕಾರ್ಯನಿರ್ವಾಹಕ ಮಂಡಳಿ ಪರವಾಗಿ

ದಿನಾಂಕ : 23.10.2021 (ಡಿ.ವಿ. ಆರಾಧ್ಯಮಠ್), ಪ್ರಧಾನ ವ್ಯವಸ್ಥಾಪಕರು

ಸೂಚನೆ : ಪ್ರಕಟಿತ ಆಸ್ತಿ-ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳನ್ನು ದೃಶ್ಯ ಮಾಧ್ಯಮದ ಸಭೆಯಲ್ಲಿ ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ.

**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಆಡಳಿತ ಕಛೇರಿ, ನಂ.120, ಎಚ್.ಎಂ. ರಸ್ತೆ, ದಾವಣಗೆರೆ-577001

**ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಶ್ರೀಮತಿ ಎ.ಆರ್. ದೇವಮ್ಮ ಮತ್ತು ಶ್ರೀ ಎ.ಆರ್. ಬಸವರಾಜಪ್ಪ ಇವರು ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುತ್ತಾರೆ. ಸದರಿಯವರು ಬ್ಯಾಂಕಿಗೆ ಅಡಮಾನ ಮಾಡಿದ ಆಸ್ತಿಗಳು ನಿಯಮಾನುಸಾರ ಬ್ಯಾಂಕಿನ ಹೆಸರಿಗೆ ವರ್ಗಾವಣೆಗೊಂಡಿರುತ್ತವೆ. ಬಾಕಿ ವಸೂಲಿಗಾಗಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಈ ಕೆಳಗೆ ವಿವರಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತದೆ. ಆಸಕ್ತರು ಮಾರಾಟ ವಾಡಿಕೆಯಲ್ಲಿರುವ ಷರತ್ತುಗಳಿಗೆ ಒಳಪಟ್ಟು ಬಿಡ್ ಮೂಲಕ ಪಡೆಯಬಹುದು.

| ಸೊತ್ತುಗಳ ಮಾಲೀಕರು | ಹರಾಜಾಗುವ ಸ್ವತ್ತುಗಳ ವಿವರ | ಬಹಿರಂಗ ಹರಾಜಿನ ಸ್ಥಳ, ದಿನಾಂಕ ಮತ್ತು ಸಮಯ |
|---|---|---|
| ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರ ಹೆಸರಿಗೆ ವರ್ಗಾವಣೆಗೊಂಡಿರುವ ಸೊತ್ತುಗಳು | ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ಸರ್ವೆ ನಂ.103/2 ರಲ್ಲಿರುವ ನಂ.560 ರಿಂದ 569 ಒಟ್ಟು 10 ನಿವೇಶನಗಳು. ನಿವೇಶನ ಅಳತೆ : | ದಿನಾಂಕ :30-11-2021 ರ ಶನಿವಾರ. ಸಮಯ : ಬೆಳಿಗ್ಗೆ 11-00 ಗಂಟೆಗೆ. ಸೊತ್ತಿನ ಮುಂಭಾಗದಲ್ಲಿ. |

| ಕ್ರಸಂ. | ನಿವೇಶನ ಸಂಖ್ಯೆ | ಅಳತೆ ಅಡಿಗಳಲ್ಲಿ | ಒಟ್ಟು ಅಳತೆ ಚ. ಅಡಿಗಳಲ್ಲಿ |
|---|---|---|---|
| 1 | 565 | 41.6+38/2X50+52/2 | 2030 |
| 2 | 566 | 50X30 | 1500 |
| 3 | 567 | 50X30 | 1500 |
| 4 | 568 | 50X30 | 1500 |
| 5 | 569 | 50+53.6/2 X 49+30/2 | 2046 |
| 6 | 560 | 50+59/2 X 52+12/2 | 1744 |
| 7 | 561 | 30+40/2 X 52+72/2 | 2170 |
| 8 | 562 | 30+37.5/2 X 79+74/2 | 2582 |
| 9 | 563 | 46+50/2 X 44+30/2 | 1776 |
| 10 | 564 | 30+48/2 X 44+30/2 | 1443 |
| | | ಒಟ್ಟು ಅಳತೆ 18291 ಚ. ಅಡಿಗಳು | |

ಬಹಿರಂಗ ಹರಾಜಿನ ಷರತ್ತುಗಳು :-(1) ಹರಾಜಿನಲ್ಲಿ ಭಾಗವಹಿಸುವವರು ಬ್ಯಾಂಕಿನಲ್ಲಿ ಹರಾಜು ಸ್ಥಳದಲ್ಲಿ ರೂ.50,000/- ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು. ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಹೆಸರು ಮತ್ತು ವಿಳಾಸ ಭಾವಚಿತ್ರವಿರುವ ಗುರುತಿನ ಚೀಟಿ ಮತ್ತು ಪ್ಯಾನ್ ಕಾರ್ಡ್‌ನೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ.(5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಪ್ರಧಾನ ವ್ಯವಸ್ಥಾಪಕರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇ.15 ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಸ್ಟಾಂಪ್ ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸರತಕ್ಕದ್ದು. (7) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (8) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (9) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (10) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗು ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹಿರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 5-00 ಗಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು

# ಪ್ರಿಯಾಂಕಾ ಬಂಧನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ




ಹರಪನಹಳ್ಳಿ, ಅ.8- ಉತ್ತರ ಪ್ರದೇಶದ ಲಖೀಂಪುರ್‌ದಲ್ಲಿ ಹೋರಾಟ ನಿರತ ರೈತರ ಮೇಲೆ ಕಾರು ಚಲಾಯಿಸಿ, ರೈತರನ್ನು ಹತ್ಯೆ ಮಾಡಿರುವ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶೀಶ್ ಮಿಶ್ರಾ ಬಂಧನವಾಗಬೇಕು. ಪ್ರಿಯಾಂಕಾ ಗಾಂಧಿ ಅವರನ್ನು ಅಕ್ರಮವಾಗಿ ಬಂಧಿಸಿದ ಪೊಲೀಸರನ್ನು ಅಮಾನತ್ತುಗೊಳಿಸುವಂತೆ ಆಗ್ರಹಿಸಿ, ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ರೈತ ವಿರೋಧಿ ಬಿಜೆಪಿ ಸರ್ಕಾರ ತನ್ನ ವಿರುದ್ಧ ಧ್ವನಿ ಎತ್ತುತ್ತಿರುವ ರೈತರ ಉಸಿರನ್ನೇ ಅಡಗಿಸಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದ್ದು, ಯೋಗಿ ಆದಿತ್ಯನಾಥ ನೇತೃತ್ವದ ಉತ್ತರ ಪ್ರದೇಶ ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ಆಕ್ರೋಶ ವ್ಯಕ್ತಪಡಿಸಿದರು.

ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ್, ಲಾಟಿ ದಾದಾಪೀರ್, ಪೈಲ್ವಾನ್ ಗಣೇಶ್, ಮುಖಂಡರಾದ ಕೆ.ಎಂ. ಬಸವರಾಜಯ್ಯ, ಎಚ್.ವಸಂತಪ್ಪ, ಮಹಿಳಾ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷೆ ಪುಷ್ಪಾ ದಿವಾಕರ್, ತಾ.ಪಂ. ಮಾಜಿ ಸದಸ್ಯೆ ಕಂಚೀಕೆರೆ ಜಯಲಕ್ಷ್ಮಿ, ಸಹನಾ ನಾಗರಾಜ್, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್. ಶಿವರಾಜ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ. ರಿಯಾಜ್, ತಿಮ್ಮಲಾಪುರ ಈಶ್ವರ್, ಬೂದಿಹಾಳ್ ಸಿದ್ದೇಶಪ್ಪ, ಕುಂಚೂರು ಸಂಜೀವಪ್ಪ, ಕಂಚಿಕೇರಿ ಕೆಂಚಪ್ಪ, ಕುಂಚೂರು ಇಬ್ರಾಹಿಂ, ಜಾಫರ್‌ಸಾಬ್, ಗುಂಡಗತ್ತಿ ನೇತ್ರಾವತಿ, ಕವಿತಾ ಸುರೇಶ್, ರತ್ನಮ್ಮ ಸೋಮಪ್ಪ, ಭೋವಿ ರೇಣುಕಮ್ಮ, ಕಂಚಿಕೇರಿ ಗ್ರಾ.ಪಂ. ಅಧ್ಯಕ್ಷೆ ವೈ. ಹನುಮಂತಮ್ಮ ಗಣೇಶ್, ಅಡವಿಹಳ್ಳಿ ಗ್ರಾ.ಪಂ. ಅಧ್ಯಕ್ಷ ತಿಮ್ಮಪ್ಪ, ಹಲುವಾಗಲು ಗ್ರಾ.ಪಂ. ಉಪಾಧ್ಯಕ್ಷೆ ಶೃತಿ, ಪೋತಲಕಟ್ಟೆ ತಿಮ್ಮಪ್ಪ, ನಿಟ್ಟೂರು ಹನುಮಂತ, ಶಿವಪುತ್ರ, ಗೌರಿಪುರ ನಾರಾಯಣ ಗೌಡ, ಶಿವಮೂರ್ತಯ್ಯ, ಮಾಡ್ಲಿಗೇರಿ ಹನುಮಂತ, ತಾಜ್‌ಪೀರ್, ತಿಪ್ಪನಾಯಕನಹಳ್ಳಿ ಆನಂದ್, ಪಕ್ಕೀರಪ್ಪ ಇನ್ನಿತರರು ಪಾಲ್ಗೊಂಡಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ



ಹರಿಹರ

ಹರಿಹರ, ಅ.8- ನಗರದ ಎನ್. ಹೆಚ್. ಶ್ರೀನಿವಾಸ್ ಸ್ನೇಹ ಬಳಗದ ವತಿಯಿಂದ ತಾಲ್ಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಜಾತಿ ಭೇದವಿಲ್ಲದೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಉಚಿತ ತರಬೇತಿ ಹಾಗೂ ಕಲಿಕಾ ಸಾಮಗ್ರಿಗಳನ್ನು ನೀಡಲಾಗುವುದು ಎಂದು ಬಳಗದ ಮುಖಂಡ ಎನ್.ಹೆಚ್. ಶ್ರೀನಿವಾಸ್ ತಿಳಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿ ಯಲ್ಲಿ ಅವರು ಮಾತನಾಡಿದರು.

ಯುಪಿಎಸ್‌ಸಿ, ಕೆಪಿಎಸ್‌ಸಿ ಹಾಗೂ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಉತ್ತರ ಭಾರತದವರೇ ಹೆಚ್ಚಾಗಿ ಆಯ್ಕೆಯಾಗುತ್ತಾರೆ. ರಾಜ್ಯದ ಕನ್ನಡಿಗರಿಗೆ ಸೂಕ್ತ ಮಾರ್ಗದರ್ಶದ ಕೊರತೆಯೇ ಕಾರಣ ಎಂದರಿತ ಬಳಗವು ಪದವಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರತಿ ತಿಂಗಳ 2ನೇ ಭಾನುವಾರ ಹಾಗೂ 4ನೇ ಭಾನುವಾರ ಸಂಪನ್ಮೂಲ ವ್ಯಕ್ತಿಗಳಿಂದ ತರಗತಿ ಹಾಗೂ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸಮೂಹದ ಮೈಂಡ್ ಮೂಲಕ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ ಎಂದು ಅವರು ಹೇಳಿದರು.

ಆಸಕ್ತ ವಿದ್ಯಾರ್ಥಿಗಳು ಬಳಗದ ವತಿಯಿಂದ ನೀಡಲಾಗುವ ಗೂಗಲ್ ಫಾರಂ (Google from-https:gle/zwz8 NqXTraju8ZtR7) ಅನ್ನು ಅಕ್ಟೋಬರ್ 15 ರೊಳಗೆ ಭರ್ತಿ ಮಾಡಿ, ದಾಖಲೆಗಳೊಂದಿಗೆ ಎನ್.ಹೆಚ್. ಶ್ರೀನಿವಾಸ್, ಎಕ್ಸ್‌ಪರ್ಟ್ ಸೆಕ್ಯೂರ್, ಶಿವಮೊಗ್ಗ ರಸ್ತೆ. ಹರಿಹರ ಈ ಕಚೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಎನ್. ಮಂಜುನಾಥ್ (9964866387), ಕೆ.ಎಂ. ಅಕ್ಷತಾ (9071291672), ಸುಚೇತ್ ಡಿ. ಪೂಜಾರ್ (8553501968) ಅವರನ್ನು ಸಂಪರ್ಕಿಸಬಹುದು.

## 3ನೇ ನವದುರ್ಗಿಯ ರೂಪ ಚಂದ್ರಘಂಟಾ ದೇವಿಗೆ ನಮನ



ಮೂರನೆಯ
ನವರಾತ್ರಿಯ ದಿನದಿ
ಮೂರುತಿ ನಿಲ್ಲಲಿ
ಮನದಲ್ಲಿ
ಮೂರು ಕಣ್ಣಿನ
ಚಂದ್ರಘಂಟಾ ದೇವಿಯ
ಪರಮ ಕಾರುಣ್ಯ ನಮಗಾಗಲಿ

ಚಂದ್ರಘಂಟಾಕಾರ ಕುಂಕುಮ ಹಚ್ಚಿ
ಚಂದ್ರನ ಕಾಂತಿಲಿ ಹೊಳೆವವಳೆ
ಚಂದ್ರಾನನೆ ಚಂದ್ರಚೂಡ ಶಿವಸತಿ
ಚಂದ್ರನಂತೆ ತಂಪು ಕೊಡುವವಳೆ

ನವವಧು ನೀನಮ್ಮ ಪಾಲಿಸೆ ಜನನಿ
ಭವವನ್ನು ತಪದಲಿ ಗೆದ್ದವಳೆ
ಭುವನಕೆ ಸಂತೋಷ ನೆಮ್ಮದಿ ನೀಡುವ
ಭವಾನಿ ನಮಿಸುವೆ ಕಾಯಮ್ಮ

ಕೆಂಪು ಸೀರೆಯುಟ್ಟ ತ್ರಿಪುರಸುಂದರಿ
ತಂಪಾದ ಮಂದಹಾಸ ಮೊಗದವಳೆ
ಕಂಪಿಸೊ ಹೃದಯ ದೌರ್ಬಲ್ಯ ಕಳೆವಳೆ
ಇಂಪಾದ ಗಾಯನಕೆ ಒಲಿವವಳೆ

ಬಾಗಿ ನಮಿಪೆ ಚಂದ್ರಘಂಟಾ ದೇವಿಯೆ
ಮಗುವಂತೆ ಸಲಹಮ್ಮ ತಾಯಿಯೆ
ನಗುತ ತಪ್ಪುಗಳ ತಿದ್ದಿ ಸಲಹಮ್ಮ
ತ್ರಿಗುಣಾತೀತ ಸಿರಿಹರಿ ತಂಗಿಯೆ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಮಲೇಬೆನ್ನೂರು : ಭದ್ರಕಾಳಮ್ಮ ದೇವಿಗೆ ಬ್ರಹ್ಮಚಾರಿಣಿ ಅಲಂಕಾರ



ಮಲೇ ಬೆನ್ನೂರು, ಅ.8- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶ್ರೀ ಭದ್ರಕಾಳಮ್ಮ ದೇವಿಗೆ ಶರನ್ನವರಾತ್ರಿ ಪ್ರಯುಕ್ತ ಎರಡನೇ ದಿನ ಬ್ರಹ್ಮಚಾರಿಣಿ ದೇವಿಯ ವಿಶೇಷ ಅಲಂಕಾರ ಮಾಡಲಾಗಿತ್ತು.

## ನಗರದಲ್ಲಿ ಉದ್ಯಮಶೀಲತಾ ತರಬೇತಿ

ದಾವಣಗೆರೆ, ಅ. 8- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಪ್ರಾಯೋಜಕತ್ವದಲ್ಲಿ ಸಿಡಾಕ್ ಧಾರವಾಡ ಸಂಸ್ಥೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ 10 ದಿನಗಳ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮವನ್ನು ನವೆಂಬರ್ ತಿಂಗಳಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಸಂಘಟಿಸಲು ಉದ್ದೇಶಿಸಲಾಗಿದೆ.

'ಸ್ವಂತ ಉದ್ಯೋಗ ಸ್ಥಾಪಿಸಿ ಸುಖಿ, ಸಮೃದ್ಧಿ ಸಾಧಿಸಿ' ಎಂಬಂತೆ ದಾವಣಗೆರೆಯ ಸಿಡಾಕ್ ಕೇಂದ್ರದಿಂದ ಸ್ವಂತ ಉದ್ಯಮ ಸ್ಥಾಪಿಸಲು ಇಚ್ಛಿಸುವ ಹಾಗೂ ಸ್ವ-ಉದ್ಯಮ ಪ್ರಾರಂಭಿಸಿ ಉದ್ಯಮವನ್ನು ಅಭಿವೃದ್ಧಿಪಡಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳಿಗೆ ವಸತಿಯುತ ತರಬೇತಿ ಹಮ್ಮಿಕೊಳ್ಳಲಾಗಿದೆ.

ವಿವರಗಳಿಗಾಗಿ ಮೊಬೈಲ್ ಸಂಖ್ಯೆ: 9164742033 ಜಿ.ಬಿ. ಬಸವರಾಜ ತರಬೇತುದಾರರು, ಜಂಟಿ ನಿರ್ದೇಶಕರು, ಸಿಡಾಕ್ ಕಚೇರಿ, ಪ್ಲಾಟ್ ನಂ.78 ಎ- (ಪಿ1), ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ ರಸ್ತೆ ದಾವಣಗೆರೆ ಇವರನ್ನು ಸಂಪರ್ಕಿಸಬಹುದು.

# ಹರಪನಹಳ್ಳಿ : ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಕರುಣಾಕರ ರೆಡ್ಡಿ ಭೂಮಿ ಪೂಜೆ



ಹರಪನಹಳ್ಳಿ, ಅ.8- ನೆರೆ ಹಾವಳಿಯಿಂದ ಹಾನಿಯಾದ ರಸ್ತೆ ಅಭಿವೃದ್ಧಿ ಯೋಜನೆ ಅಡಿ ತಾಲ್ಲೂಕಿನ ಹಿರೇಮೇಗಳಗೆರೆಯಿಂದ ಜಗಳೂರು ತಾಲ್ಲೂಕು ಗಡಿ ಸೇರುವ ಸರಪಳಿಯವರೆಗೆ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಜಿ. ಕರುಣಾಕರ ರೆಡ್ಡಿ ಭೂಮಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ತಾಲ್ಲೂಕಿನ ಅರೆ ಬಸಾಪುರ ಕ್ರಾಸ್‌ವರೆಗೆ ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಶೀಘ್ರದಲ್ಲೇ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಹೇಳಿದರು. ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಮಡಿವಾಳರು, ಕ್ಷೌರಿಕರು ಹಾಗೂ ಟೈಲರ್‌ಗಳಿಗೆ ಆಹಾರದ ಕಿಟ್ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಗ್ರಾ.ಪಂ. ಅಧ್ಯಕ್ಷರಾದ ಉಮಾ ಮಂಜುನಾಥ್, ಉಪಾಧ್ಯಕ್ಷ ವೆಂಕಟೇಶ್ ನಾಯ್ಕ್, ಸದಸ್ಯರಾದ ಮಂಜುನಾಥ, ಅಂಗಡಿ ಪ್ರಕಾಶ್, ಪರಶುರಾಮ, ವೀರಣ್ಣ, ರವಿ, ಪೋತಲಗಟ್ಟೆ ಮಂಜಣ್ಣ, ಎ.ಇ. ಲಿಂಗಪ್ಪ, ಪ್ರಥಮ ದರ್ಜೆ ಗುತ್ತಿಗೆದಾರ ಪಿ. ಕೊಟ್ಟೂರೇಶ್ವರ ಹುಣಸಿಹಳ್ಳಿ, ಮುಖಂಡರಾದ ಆರ್.ಲೋಕೇಶ್, ತಾ.ಪಂ. ಸದಸ್ಯ ಶಿಂಗ್ರಿಹಳ್ಳಿ ನಾಗರಾಜ್, ಮಹೇಶ್, ನರೇಶ್, ಅಶೋಕ್, ವೆಂಕಟೇಶ್ ನಾಯ್ಕ್, ಯು.ಪಿ. ನಾಗರಾಜ್, ರಾಘವೇಂದ್ರ ಶೆಟ್ಟಿ, ಸಂತೋಷ್, ಸಿದ್ದೇಶ್ ರೆಡ್ಡಿ ಇನ್ನಿತರರಿದ್ದರು.

## ಚಿತ್ರದುರ್ಗದಲ್ಲಿ ಇಂದು ಲೋಕೇಶ್ ಅಗಸನಕಟ್ಟೆಯವರ ಕಾದಂಬರಿ ಬಿಡುಗಡೆ



ಗೆಳೆಯರ ಬಳಗ (ಚಿತ್ರದುರ್ಗ) ಮತ್ತು ಅಹರ್ನಿಷಿ ಪ್ರಕಾಶನ (ಶಿವಮೊಗ್ಗ) ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ತ.ರಾ.ಸು. ರಂಗಮಂದಿರದಲ್ಲಿ ಗಾಂಧಿ, ಅಂಬೇಡ್ಕರರ ಭಾರತದ ಕಥನಾತ್ಮಕ ಕಾದಂಬರಿ 'ವೈಷ್ಣವ ಜನತೋ' ಲೋಕಾರ್ಪಣೆಗೊಳ್ಳಲಿದೆ.

ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸುವರು. ಕವಿ ಬೆಂಗಳೂರಿನ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಹರಿಹರ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ನ ಟ್ರಸ್ಟಿ ರುದ್ರಪ್ಪ ಹನಗವಾಡಿ ಪುಸ್ತಕ ಬಿಡುಗಡೆ ಮಾಡಲಿದ್ದು, ಕವಿ ಬೆಂಗಳೂರಿನ ಡಾ. ಬಂಜಗೆರೆ ಜಯಪ್ರಕಾಶ್ ಕೃತಿ ಕುರಿತು ಮಾತನಾಡಲಿದ್ದಾರೆ.

## ನಗರದಲ್ಲಿ ಇಂದು ದಾಂಡಿಯಾ ರಾಸ್

ರಿದ್ಧಿ - ಸಿದ್ಧಿ ಫೌಂಡೇಶನ್ ವತಿಯಿಂದ ಐ.ಎಮ್.ಎ. ಹಾಲ್ ನಲ್ಲಿ 14 ನೇ ವರ್ಷದ ನವರಾತ್ರಿ ದಸರಾ ಹಬ್ಬದ ಪ್ರಯುಕ್ತ ಭಾರತೀಯ ಸಂಪ್ರದಾಯದಂತೆ ದಾಂಡಿಯಾ ರಾಸ್ ಕಾರ್ಯಕ್ರಮವನ್ನು ಇಂದು ಸಂಜೆ ಹಮ್ಮಿಕೊಳ್ಳಲಾಗಿದೆ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮುಖ್ಯ ಅಥಿತಿಗಳಾಗಿ ಶಾಮನೂರು ಮಲ್ಲಿಕಾರ್ಜುನ್, ಮಹಾಂತೇಶ ಬೀಳಗಿ, ದಿನೇಶ್. ಕೆ. ಶೆಟ್ಟಿ, ಎ. ನಾಗರಾಜ್, ಆನಂದಸ್ವಾಮಿ ಗಡ್ಡ ದೇವರಮಠ, ಮಂಜುನಾಥ ಗಡಿಗುಡಾಳ್, ಹರಪನಹಳ್ಳಿಯ ಉತ್ತಮಚಂದ್ ಜೈನ್, ಈಶ್ವರ್ ಸಿಂಗ್ ಕವಿತಾಳ್, ಶ್ರೀನಿವಾಸ ದಾಸಕರಿಯಪ್ಪ, ರಾಜು ಭಂಡಾರಿ, ವಿಜಯಕುಮಾರ್, ಶ್ರೀಕಾಂತ್ ಬಗರೆ ಮತ್ತಿತರರು ಆಗಮಿಸಲಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ತರಳಬಾಳು ಬಡಾವಣೆ, ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ ಸರ್ಕಾರಿ ಐ.ಟಿ.ಐ. ಕಾಲೇಜು, ಹದಡಿ ರಸ್ತೆ, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನ್ಯಾಮತಿ ತಾ||ನಲ್ಲಿ ವಿದ್ಯುತ್ ವ್ಯತ್ಯಯ

ನ್ಯಾಮತಿ, ಸುರಹೊನ್ನೆ, ಯರಗನಾಳು, ರಾಮೇಶ್ವರ, ಗಂಗನಕೋಟೆ, ಸಾಲಬಾಳು, ಕೋಡಿಕೊಪ್ಪ, ವಡೆಯರಹತ್ತೂರು, ಕುಂಕೋವ, ಕುದುರೆಗೊಂಡ, ಬಿಜೋಗಟ್ಟೆ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.


**ತಕ್ಷಣ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ Coffee ಮತ್ತು Serve ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. (Age 20 to 30) (ಹೋಟೆಲ್‌ನಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ) ಕೂಡಲೇ ಸಂಪರ್ಕಿಸಿ : Anjaneya Badavane, Davangere
Ph. : 93804 69079

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ (ಅಥಣಿ ಕಾಲೇಜು ಹತ್ತಿರ) ಉತ್ತರ 30x40 ಒಂದು ಮಳಿಗೆ ಕೆಳಗೆ ಮನೆ ಮೇಲೆ ಮನೆ ಮತ್ತೆ 2 ರೂಂ, ಪೂರ್ವ 40x50 ಕೆಳಗೆ ಮನೆ ಮೇಲೆ ಮನೆ ಪಶ್ಚಿಮ 30x50 ಕೆಳಗೆ ಮನೆ ಮೇಲೆ ಮನೆ ಮತ್ತೆ 2 ರೂಂ
ಐಗೂರು ವಿಜಯಕುಮಾರ್
99457 02495

**ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ಸಿಂಗಲ್ ಬೆಡ್‌ರೂಂ ಮನೆ 5 ಲಕ್ಷಕ್ಕೆ, ಎರಡು ಬೆಡ್‌ರೂಂ, ಮೂರು ಬೆಡ್ ರೂಂ, ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
94814 52642

**ಪಿ.ಜೆ & ಎಸ್.ಎಸ್. 'ಬಿ' ಬ್ಲಾಕ್ ಸೈಟ್‌ಗಳು ಮಾರಾಟಕ್ಕಿವೆ**
ಪಿ.ಜೆ ಬಡಾವಣೆ ಪಶ್ಚಿಮ 45x85, ಎಸ್.ಎಸ್. ಬಿ ಬ್ಲಾಕ್ ಪಶ್ಚಿಮ ದಕ್ಷಿಣ ಕಾರ್ನರ್ 40x50 ಮತ್ತು ಉತ್ತರ 30x43. ಸೈಟ್‌ಗಳು ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಸೇಲ್ಸ್‌ಮನ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ : Rs. 8,000 + Incentive
Mob. 73490 67147

**ಬೇಕಾಗಿದ್ದಾರೆ**
KSRTC ನಮ್ಮ ಕಾರ್ಗೋ ಆಫೀಸ್ ನಲ್ಲಿ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ ಬೆಂಗಳೂರಿನಲ್ಲಿ ಕೆಲಸ ಮಾಡುವವರಿಗೆ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ ಮೊದಲು ಬಂದವರಿಗೆ ಆದ್ಯತೆ ಹೆಚ್ಚಿನ ಮಾಹಿತಿಗಾಗಿ KSRTC ಬಸ್ ಸ್ಟಾಂಡ್ ಸೇವೆಗೆ ಕಾಲೇಜ್ ರೋಡ್ ಹೈಸ್ಕೂಲ್
7338203872, 9008475410

**ಎಂ.ಸಿ.ಸಿ 'ಎ' & 'ಬಿ' ಮನೆಗಳು ಮಾರಾಟಕ್ಕಿವೆ**
ಎಂ.ಸಿ.ಸಿ 'ಎ' ಬ್ಲಾಕ್ ಪಶ್ಚಿಮ 22x50, ಎಂ.ಸಿ.ಸಿ 'ಬಿ' ಬ್ಲಾಕ್ ದಕ್ಷಿಣ 30x50 ಕೆಳಗೆ ಡೂಪ್ಲೆಕ್ಸ್ ಮೇಲೆ 2BHK & 1BHK ಮತ್ತೆ ಮೇಲೆ ರೂಂ
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಜನನಿ (ಸಿರಿಧಾನ್ಯಗಳ ಕಣಜ) ಮಿಲೆಟ್ ಹೆಲ್ತ್ ಮಿಕ್ಸ್ ಗೆ ದಾವಣಗೆರೆ ಜಿಲ್ಲೆಯ ತಾಲ್ಲೂಕು ವಿತರಕರು (Distributers) ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. : 77601 04892

**ಬೇಕಾಗಿದ್ದಾರೆ**
ನೀರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
86609 67207

**ಮಹಾಲಕ್ಷ್ಮಿ ಮತ್ತು ಕುಂದವಾಡ ಕೆರೆ ಪಕ್ಕ ಸೈಟ್‌ಗಳು ಮಾರಾಟಕ್ಕಿವೆ**
ಶಿವಗಂಗೆ ಕಲ್ಯಾಣ ಮಂಟಪ ಹಿಂಭಾಗ ಪೂರ್ವ-ದಕ್ಷಿಣ ಕಾರ್ನರ್ 30x40 ಉತ್ತರ ಪಶ್ಚಿಮ 30x40 ಕಾರ್ನರ್ ಮತ್ತು ಪಶ್ಚಿಮ 30x40 ಕುಂದವಾಡ ರಸ್ತೆ ಉತ್ತರ-ಪಶ್ಚಿಮ ಕಾರ್ನರ್ 25x47, ಪೂರ್ವ 30x47, 30x55
ಐಗೂರು ವಿಜಯಕುಮಾರ್
99457 02495

**ಖಾಲಿ ನಿವೇಶನ ಮಾರಾಟಕ್ಕಿದೆ**
30x40, (ಉತ್ತರ ದಿಕ್ಕಿನ) 106 ಡೋರ್ ನಂಬರಿನ ಫೈನಲ್ ಅಪ್ರೂವಲ್ ಸೈಟ್ ವಿಜಯನಗರ ಬಡಾವಣೆ, ದಾವಣಗೆರೆಯಲ್ಲಿ ಮಾರಾಟಕ್ಕಿದೆ.
87920 96172

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**2BHK For Rent**
Furnished 2 BHK with Car parking, Own Bore + Corporation Water, North Facing, Common & Attached Bathroom, First Floor, Near 1st Bus Stop, Vidyanagar Davanagere. Available for Rent. Rs. 12,000. Contact
Mob. : 99808 22722

**ರೂಂ ಬಾಡಿಗೆಗೆ ವಿಚಾರಿಸಿ**
ವಿದ್ಯಾರ್ಥಿ ಭವನ ಹತ್ತಿರ (ಸುಕೋ ಬ್ಯಾಂಕ್ ಹಿಂಭಾಗ) ರೂಂ ಆಫೀಸ್‌ಗೆ ಹಾಗೂ ವಾಸಕ್ಕೆ ಯೋಗ್ಯವಿರುವ ರೂಂ ಬಾಡಿಗೆಗೆ ಇದೆ ವಿಚಾರಿಸಿ.
98454 66995

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 90080 67049

**Space For Rent**
Suitable for Corporate Office, Coachaing center, yoga Therapy, poly clinic etc. First & Second Floor Each 1600 sqft Prime location, 3rd main, P.J. Extn, Near Chethana hotel
98807 65683
97422 73362

**ಬೇಕಾಗಿದ್ದಾರೆ**
ಸ್ಟಾಫ್ ನರ್ಸ್‌ಗಳು ಬೇಕಾಗಿದ್ದಾರೆ ಮನೆ ಕೆಲಸಕ್ಕೆ ಬೇಕಾಗಿದ್ದಾರೆ ಆಸ್ಪತ್ರೆಗೆ ವಾಚ್ ಮೆನ್ ಬೇಕಾಗಿದ್ದಾರೆ. ಸಂಪರ್ಕಿಸಿ :
98808 53626

**ವಾಹನ ಮಾರಾಟಕ್ಕಿದೆ**
ಉತ್ತಮ ಸ್ಥಿತಿಯಲ್ಲಿರುವ 2012 Model Force Kargo King ವಾಹನ ಮಾರಾಟಕ್ಕಿದೆ. ಕೆ.ಬಿ.ಆರ್ ಇಂಡಸ್ಟ್ರೀಸ್, ಟಿ.ಸಿ ಲೇಔಟ್, ಆರ್.ಎಂ.ಸಿ ಲಿಂಕ್ ರೋಡ್, ದಾವಣಗೆರೆ-577001
Ph. 6362147549

**2BHK ಮನೆಗಳು ಬಾಡಿಗೆಗೆ/ಲೀಜ್‌ಗೆ ಇವೆ**
ಕುಂದುವಾಡದ ಕೆರೆ, ಮಹಾಲಕ್ಷ್ಮಿ ಬಡಾವಣೆಯಲ್ಲಿ ಕಾವೇರಿ ಅಪಾರ್ಟ್ ಮೆಂಟ್ ಹಿಂಭಾಗದಲ್ಲಿ ಹೊಸದಾಗಿ ನಿರ್ಮಿಸಿರುವ ಎಲ್ಲಾ ಆಧುನಿಕ ಸೌಲಭ್ಯಗಳಿರುವ 2BHK ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ /ಲೀಜ್‌ಗೆ ಇವೆ.
73380 43912, 63663 27368

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್ ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ ಪಿ.ಜೆ ಬಡಾವಣೆ, ದಾವಣಗೆರೆ.

**ಮನೆ ಮಾರಾಟಕ್ಕಿದೆ**
30x40 ಉತ್ತರಾಭಿಮುಖ, ಸಿದ್ಧಗಂಗಾ ಬಡಾವಣೆ, ಎಸ್.ಎಸ್. ಆಸ್ಪತ್ರೆ ಹಿಂಭಾಗ, ಶ್ರೀರಾಮ್ ನಗರದ ಹತ್ತಿರ, ದಾವಣಗೆರೆ.
95350 12779

**ಫಸಲು ಕೊಡುವ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 16 ಕಿ.ಮೀ ದೂರದಲ್ಲಿ ಅಪ್ಪೋಸ್ ಮಾವು 4 ಎ. 30 ಸೆಂಟ್ಸ್, ತೆಂಗು ಮತ್ತು ಅಡಿಕೆ ತೋಟ 2 ಎ. 15 ಸೆಂಟ್ಸ್, ಮತ್ತು ತೇಗದ ಮರ 12 ವರ್ಷದ್ದು 0.30 ಸೆಂಟ್ಸ್, ಒಟ್ಟು 7.16 ಸೆಂಟ್ಸ್, 2 ಬೋರ್‌ವೆಲ್, ರಸ್ತೆ ಮತ್ತು ತಂತಿಬೇಲಿ ಹಾಗೂ ಡ್ರಿಪ್ ಹೊಂದಿರುವ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ:
98809 33630

**ಮನೆಗಳು ಬಾಡಿಗೆಗಿವೆ**
S.S, A. ಬ್ಲಾಕ್ 2ನೇ ಕ್ರಾಸ್, V.V ರೆಸಿಡೆನ್ಸ್ 1st ಫ್ಲೋರ್, ವಾಸ್ತು ಪ್ರಕಾರ ಇರುವ 2 ಬೆಡ್ ರೂಂನ ಮನೆಗಳು ಖಾಲಿ ಇವೆ. ಕಾರ್ಪೊರೇಷನ್ ನೀರು ಮತ್ತು ಬೋರ್‌ವೆಲ್ ನೀರಿನ ಸೌಲಭ್ಯ ಇರುತ್ತದೆ ಹಾಗೂ ಕಾರ್ ಪಾರ್ಕಿಂಗ್ ಇದೆ.
94487 27266, 94481 34340

**ಬೇಕಾಗಿದ್ದಾರೆ**
ಕಾರ್ಖಾನೆಯಲ್ಲಿ Machin Operating ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC or ITI, ಸಮಯ: ಬೆಳಿಗ್ಗೆ 9 ರಿಂದ ಸಂಜೆ 6 (ದಾವಣಗೆರೆ ಕಾರ್ಮಿಕರಿಗೆ ಆದ್ಯತೆ) ಹೆಚ್ಚಿನ ಮಾಹಿತಿಗೆ.
ಸಂಪರ್ಕಿಸಿ: 87110 63041

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ PUC, SCIENCE, COMMERCE, ARTS ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
98445 82000

**14 ದಿನಗಳ ಕಾಶಿ ಪ್ರವಾಸ ದಾವಣಗೆರೆಯಿಂದ**
ದಿ.15 ನವೆಂಬರ್ ರೈಲು ಮತ್ತು ವಿಮಾನದಲ್ಲಿ ದೆಹಲಿ, ಆಗ್ರಾ, ಪ್ರಯಾಗರಾಜ್, ಕಾಶಿ, ಸಾರನಾಥ್, ಅಯೋಧ್ಯ, ಹರಿದ್ವಾರ, ಹೃಷಿಕೇಶ್. ಗೀತಾ ಟ್ರಾವೆಲ್ಸ್, ದಾವಣಗೆರೆ. ಎಸ್.ಎ. ರಾಜು
94481 62499, 99455 34966

**TO-LET**
2BHK House at 1st Floor (Veg only), Shop at Ground Floor. B.T Galli Sri Chowdambika Devi Temple Road Davangere-1
97392 65666

**ಬೇಕಾಗಿದ್ದಾರೆ**
ಗ್ಯಾಸ್ ಗೋಡೌನ್‌ನಲ್ಲಿ ಲೋಡ್, ಅನ್‌ಲೋಡ್ ಮಾಡಲು ಕೆಲಸಗಾರರು ಬೇಕಾಗಿದ್ದಾರೆ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಸುಬ್ರಹ್ಮಣ್ಯ ಗ್ಯಾಸ್ ಏಜೆನ್ಸಿ, 1st ಮೇನ್, 1st ಕ್ರಾಸ್ ಶಿವಪ್ಪಯ್ಯ ಸರ್ಕಲ್ ಹತ್ತಿರ, ಕೆ.ಟಿ.ಜೆ ನಗರ. ದಾವಣಗೆರೆ.
08192-254098, 08192-254121
(ಭೇಟಿಯ ಸಮಯ ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ)

**ಬೇಕಾಗಿದ್ದಾರೆ**
ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. BIO DATA ಜೊತೆ ಸಂಪರ್ಕಿಸಿ: Sanjay
94807 77622

**ಬೇಕಾಗಿದ್ದಾರೆ**
ಹೆಸರಾಂತ V star Plus ಆಯುರ್ವೇದಿಕ್ ಕಂಪನಿಯಲ್ಲಿ ಫುಲ್ ಟೈಮ್/ ಪಾರ್ಟ್ ಟೈಮ್ ಕೆಲಸ ಮಾಡಲು ನಿರುದ್ಯೋಗಿಗಳು, ಮಹಿಳೆಯರು, ನಿವೃತ್ತರು ಬೇಕಾಗಿದ್ದಾರೆ. ವಿಚಾರಿಸಿ
82176 00862
99455 98998

**WANTED SALES EXECUTIVE**
Apply or Mail your Bio Data to Parimala Coffee co. Mandipete Davangere. Email:info@parimala Coffee.com

**ಮನೆ ಭೋಗ್ಯಕ್ಕಿದೆ**
ಶ್ರೀ ಶಂಕರ ವಿಹಾರ ಲೇಔಟ್ ಟೆಲಿಫೋನ್ ಆಫೀಸ್ ಹಿಂಭಾಗ 2ಬೆಡ್ ರೂಂ ಮನೆ 1st ಫ್ಲೋರ್‌ನಲ್ಲಿ, ಕಾರ್ಪೊರೇಷನ್ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಮನೆ ಭೋಗ್ಯಕ್ಕಿದೆ. (ಸಸ್ಯಹಾರಿಗಳಿಗೆ ಮಾತ್ರ)
94489 39582

**ಬಾಡಿಗೆಗೆ ಇದೆ**
ಎರಡು ಬೆಡ್‌ರೂಂ ಇರುವ ಸುಂದರವಾದ ಮೊದಲನೆ ಮಹಡಿ ಮನೆ ನಿಜಲಿಂಗಪ್ಪ ಬಡಾವಣೆಯಲ್ಲಿ ಬಾಡಿಗೆಗೆ ಇದೆ. ನೀರು, ಗಾಳಿ ಮತ್ತು ಬೆಳಕಿಗೆ ಕೊರತೆ ಇಲ್ಲ. (ಸಸ್ಯಹಾರಿಗಳಿಗೆ ಮಾತ್ರ)
99869 36524, 99867 78748

**ಜಮೀನು ಮಾರಾಟಕ್ಕಿದೆ**
GMIT ಯಿಂದ ಹರಿಹರಕ್ಕೆ ಹೋಗುವ ರಸ್ತೆಯಲ್ಲಿ ಪೆಟ್ರೋಲ್ ಬಂಕ್ ಎದುರು ಇರುವ 1.08 ಎಕರೆ ರೋಡಿಗೆ ಲಗತ್ತಾಗಿರುವ ಜಮೀನು ಮಾರಾಟಕ್ಕಿದೆ.
8139988555
8197300410

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**REQUIRED**
GENTS AND LADIES WARDEN, RECEPTION & TELECALLING
LOCATION : DAVANGERE
CONTACT : 87628 67557, 78999 17593

**ಮನೆ ಬಾಡಿಗೆಗೆ ಇದೆ**
1BHK ಮನೆ ಖಾಲಿ ಇದೆ, ಬಾಡಿಗೆಗೆ ವಿಚಾರಿಸಿ. ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರು ಇದೆ. D.No 337/39 ಗಣೇಶ್ ಲೇಔಟ್ ಹೊಸ ಬಸ್ ನಿಲ್ದಾಣದ ಹತ್ತಿರ, ದಾವಣಗೆರೆ. ಸಂಪರ್ಕಿಸಿ
94489 25906

**ಡೀಲರ್ಸ್ ಬೇಕಾಗಿದ್ದಾರೆ**
ಅನು ಸೋಲಾರ್ ಪವರ್ ಲಿಮಿಟೆಡ್, ದಾವಣಗೆರೆ. ದಸರಾ ಹಬ್ಬದ ಪ್ರಯುಕ್ತ ಶೇ. 20 ರಷ್ಟು ರಿಯಾಯಿತಿ ಕೊಡುಗೆ.
99645 11172
99649 68999

**ಖಾಲಿ ನಿವೇಶನ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿಯಲ್ಲಿ 2100 ಚದರ ಅಡಿಯುಳ್ಳ NA ಆಗಿರುವ ಪೂರ್ವ ದಿಕ್ಕಿನ ಖಾಲಿ ನಿವೇಶನ ಮಾರಾಟಕ್ಕೆ ಇದೆ.
97414 64040

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**SHOPS FOR RENT**
With wash room facility. N.R Road Davangere.
94483 69523

**WANTED**
Receptionist -2 No's(Female) for a Resort, (NH-4 Highway) Near Davanagere. Qualification: Any Degree with Good Communication Skill & Computer Knowledge
9880975286

**ಉಚಿತ ಕಾರ್ಯಾಗಾರ**
KAS/PDO/PSI/FDA ಶ್ರೀ ಮರಿಗೌಡರ್ ಸರ್ (Geography), ಶ್ರೀ ವಸಂತ್ ಸರ್ (G.K) ಶ್ರೀ ಸತೀಶ್ ಕುರುಡೇಕರ್ (Mental ability) ಇವರಿಂದ ಕಾರ್ಯಾಗಾರ ನಡೆಸಲಾಗುವುದು. ದಿ.10.10.2021 (ಭಾನುವಾರ) ಸ್ಥಳ: ರೋಟರಿ ಬಾಲಭವನ, ದಾವಣಗೆರೆ. ಸಮಯ: ಬೆಳಿಗ್ಗೆ 10 ರಿಂದ 4 ಗಂಟೆಯವರೆಗೆ. ಸಮೃದ್ಧಿ ಕೋಚಿಂಗ್ ಅಕಾಡೆಮಿ.
63646 40296

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, B.Com, B.Sc, MA, M.Com, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಬೇಕಾಗಿದ್ದಾರೆ**
ಐಷರ್ ಟ್ರಾಕ್ಟರ್ ಶೋ ರೂಂ ನಲ್ಲಿ ಕೆಲಸ ಮಾಡಲು ತಾಲ್ಲೂಕುವಾರು "ಮಾರಾಟ ಪ್ರತಿನಿಧಿಗಳು" ಬೇಕಾಗಿದ್ದಾರೆ ಸ್ವಂತ ದ್ವಿಚಕ್ರ ವಾಹನವಿರಬೇಕು ಲೈಸೆನ್ಸ್ ಇರಬೇಕು.
ಸಂಪರ್ಕಿಸಿ :
ಶಾರದಾ ಆಟೋಸ್
KSRTC, ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಫೋ.: 63646 76457

**ಸೈಟುಗಳು ಮಾರಾಟಕ್ಕಿವೆ**
ದಸರಾ ಹಬ್ಬದ ಪ್ರಯುಕ್ತ ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾತಿಯಲ್ಲಿ ಮಾರಾಟಕ್ಕಿವೆ. Rs. 999 Sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30x40, 30x50
94829-48699, 94814-58699, 93431-10009

**ಮಳಿಗೆ ಬಾಡಿಗೆಗೆ ವಿಚಾರಿಸಿ**
ವಿದ್ಯಾರ್ಥಿ ಭವನ ಹತ್ತಿರ (ಸುಕೋ ಬ್ಯಾಂಕ್ ಹಿಂಭಾಗ) ಮಳಿಗೆ 10x15 ಗೋಡೌನ್ ಹಾಗೂ ಆಫೀಸ್‌ಗೆ ಯೋಗ್ಯವಿರುವ ಮಳಿಗೆ ಬಾಡಿಗೆಗೆ ಇದೆ ವಿಚಾರಿಸಿ
98454 66995


**ಪುರಸಭಾ ಕಾರ್ಯಾಲಯ ಹರಪನಹಳ್ಳಿ -583131 ಬಳ್ಳಾರಿ ಜಿಲ್ಲೆ**
ದೂರವಾಣಿ ಸಂಖ್ಯೆ : 08398 280258 Email: istaff_ulb_harapanahalli@yahoo.com
ಫ್ಯಾಕ್ಸ್ : 08398 280581 website: harapanahallitown.mrc.gov.in

ಕ್ರ.ಸಂ: ಪುಸ: ಹ.ಹಳ್ಳಿ/ಕಂ ಶಾ/ಸಿಆರ್/2021-22 ದಿನಾಂಕ 01.10.2021

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಷೆಡ್ಯೂಲ್ ಆಸ್ತಿಯ ಅಕ್ಕ-ಪಕ್ಕದ ಮತ್ತು ವಾರುಸುದಾರರಿಗೆ ತಿಳಿಯಪಡಿಸುವುದೇನೆಂದರೆ, ಪುರಸಭಾ ವ್ಯಾಪ್ತಿಯ ವಾರ್ಡ್ ನಂ. 02 ಶ್ರೀ ಡಂಕಿ ಇಸ್ಮಾಯಿಲ್ ಸಾಬ್ ತಂದೆ ಡಂಕಿ ಕರೀಂ ಸಾಬ್ ಇವರ ಹೆಸರಿನಲ್ಲಿರುವ ಡೋರ್ ನಂಬರ್ : 355/279 ಸ್ವತ್ತಿನ ಅಳತೆಯನ್ನು ಕಛೇರಿ ವಹಿಯಲ್ಲಿ 26.62X16.5 ಅಡಿ ಬದಲಾಗಿ 8.8x3.6 ಮೀಟರ್ ಎಂದು ನಮೂದಿಸಿರುವ ಹಿನ್ನೆಲೆಯಲ್ಲಿ ಅರ್ಜಿದಾರರು ಸಲ್ಲಿಸಿರುವ ನೋಂದಾಯಿತ ದಾಖಲೆಯಂತೆ ಸ್ಥಳ ತನಿಖೆಯಲ್ಲಿ ಲಭ್ಯವಾದ ಅಳತೆ 26.62x16.5 ಅಡಿಗಳೆಂದು ಸರಿಪಡಿಸಿ, ಕಛೇರಿಯ ವಹಿಯಲ್ಲಿ ನಮೂದಿಸಿ, ಮುಂದವರೆಸುವ ಬಗ್ಗೆ ಅಕ್ಕ-ಪಕ್ಕದವರಿಂದ ಏನಾದರು ಆಕ್ಷೇಪಣೆಗಳು/ಸಲಹೆ ಸೂಚನೆಗಳು ಇದ್ದಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನದೊಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಳ್ಳದೇ ಇದ್ದಲ್ಲಿ ಅರ್ಜಿದಾರರ ಕೋರಿಕೆಯಂತೆ ನಿಯಮಾನುಸಾರ ಕ್ರಮವಹಿಸಲಾಗುವುದು.

**ಷೆಡ್ಯೂಲ್**

| ಕ್ರ.ಸಂ | ಆಸ್ತಿ ಸಂಖ್ಯೆ | ಅಳತೆ | ಚೆಕ್ಕು ಬಂದಿ | |
|---|---|---|---|---|
| 1 | 355/279 355 | 26.62 X16.5 ಅಡಿಗಳು | ಪೂ | ರಸ್ತೆ |
| | | | ಪ | ಡೋರ್ ನಂಬರ್ 279/ಎ ನಾಲಬಂದ್ ಉಸ್ಮಾನ್ ಸಾಹೇಬರ ಮನೆ |
| | | | ಉ | ರಸ್ತೆ |
| | | | ದ | ಜಾಗ |

ಗೆ,
ಕಛೇರಿಯ ಸೂಚನಾ ಫಲಕಕ್ಕೆ ಹಾಗೂ ಪತ್ರಿಕ ಪ್ರಕಟಣೆಗಾಗಿ

ಮುಖ್ಯಾಧಿಕಾರಿ,
ಪುರಸಭೆ, ಹರಪನಹಳ್ಳಿ

# ಜಿಲ್ಲೆಯಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಕ್ರಮ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಭರವಸೆ

ದಾವಣಗೆರೆ, ಅ.8- ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿದ್ದು, ಪೊಲೀಸ್ ಇಲಾಖೆ ದೌರ್ಜನ್ಯ ತಪ್ಪಿಸುವಲ್ಲಿ ಕ್ರಮ ವಹಿಸಬೇಕು ಎಂದು ಎಸ್.ಸಿ., ಎಸ್.ಟಿ ಕುಂದು ಕೊರತೆ ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರುಗಳು ಆಗ್ರಹಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಎಸ್ಪಿ ಸಿ.ಬಿ. ರಿಷ್ಯಂತ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಕುಂದು ಕೊರತೆ ಸಭೆಯಲ್ಲಿ ಮುಖಂಡರುಗಳು ತಮ್ಮ ಅಳಲು ತೋಡಿಕೊಂಡರು.

ಎಸ್ಪಿ ರಿಷ್ಯಂತ್ ಮಾತನಾಡಿ, ಜಿಲ್ಲೆಯಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗುವುದು. ಯಾವುದೇ ಅಪರಾಧ ಪ್ರಕರಣಗಳು ಕಂಡುಬಂದರೆ ತಕ್ಷಣ 112ಕ್ಕೆ ಕರೆ ಮಾಡಿ. ಬೇಕಿದ್ದರೆ ತಮ್ಮ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು. ಹೀಗೆ ಕರೆ ಮಾಡುವುದರಿಂದ ಪೊಲೀಸರು ತಕ್ಷಣ ಸ್ಪಂದಿಸುತ್ತಾರೆ ಎಂದು ಹೇಳಿದರು.

ಜಗಳೂರು ತಾಲ್ಲೂಕಿನ ಮುಖಂಡ ಸತೀಶ್, ತಾಲ್ಲೂಕಿನ ಮದ್ದರಹಳ್ಳಿ ಚೌಡೇಶ್ವರಿ ದೇವಾಲಯದಲ್ಲಿ ಹಬ್ಬದ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ಬೇವಿನುಡಿಗೆ, ನಾಲಿಗೆಗೆ ತಂತಿ ಸಿಕ್ಕಿಸಿಕೊಳ್ಳುವಂತಹ ಆಚರಣೆಗಳನ್ನು ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚಾಗಿ ಅನುಸರಿಸುತ್ತಿದ್ದು, ಅವರುಗಳಿಗೆ ಅಧಿಕಾರಿಗಳ ಮಟ್ಟದಲ್ಲಿ ಸೂಕ್ತ ತಿಳುವಳಿಕೆ ನೀಡಿ ಇಂತಹ ಅನಿಷ್ಟ ಪದ್ಧತಿಗಳಿಂದ ಹೊರ ತರಲು ಸರ್ಕಾರ ಪ್ರಯತ್ನಿಸಲಿ ಎಂದರು. ಪ್ರತಿಕ್ರಿಯಿಸಿದ ಎಸ್ಪಿ, ಇಂತಹ ಆಚರಣೆಗಳನ್ನು ತಡೆಯಲು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.



ಜಗಳೂರು ಮುಖಂಡ ಹಾಲೇಶ್ , ಉಚ್ಚಂಗಿದುರ್ಗ ದೇವಸ್ಥಾನದಲ್ಲಿ ನಡೆಯುವ ಕಾರಹುಣ್ಣಿಮೆ ಹಬ್ಬಕ್ಕೆ ದೇವದಾಸಿಯರನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದು, ನಮ್ಮ ಭಾಗದಿಂದ ಹೆಚ್ಚು ಜನ ಹೋಗುತ್ತಿದ್ದಾರೆ. ಇದನ್ನು ತಡೆಯಬೇಕು ಎಂದರು.

ಹರಿಹರ ತಾಲ್ಲೂಕಿನ ಮುಖಂಡರು ಭಾನುವಳ್ಳಿ ಗ್ರಾಮದಲ್ಲಿ 12 ಜನ ಮಾಜಿ ದೇವದಾಸಿಯರಿದ್ದು, ಅವರಿಗೆ ಮನೆ ಮಂಜೂರಾದರೂ ಇನ್ನೂ ಮನೆ ಕಟ್ಟಿಕೊಟ್ಟಿಲ್ಲ ಎಂದರು. ನ್ಯಾಮತಿ ತಾಲ್ಲೂಕಿನ ರಂಗನಾಥ.ಎ.ಕೆ, ಒಂದೂವರೆ ಎಕರೆ ಪ್ರದೇಶದಲ್ಲಿ ಹಿಂದೂ ಸ್ಮಶಾನ ಭೂಮಿ ನಿರ್ಮಿಸಿದ್ದು, ಪರಿಶಿಷ್ಟ ಜಾತಿಯ ಹೆಣ ಸುಡಲು ಸ್ಮಶಾನಕ್ಕೆ ಹೋದರೆ ಸುಡಲು ಅನುಮತಿ ನೀಡುವುದಿಲ್ಲ ಎಂದು ದೂರಿದರು.

ಉಪ ವಿಭಾಗಾಧಿಕಾರಿ ಶ್ರೀಮತಿ ಮಮತ ಹೊಸಗೌಡರ್ ಮಾತನಾಡಿ, ಮನುಷ್ಯ ಬದುಕಿದ್ದಾಗ ಸಮಾನತೆಯಿಂದ ಬದುಕಲ್ಲ, ಸತ್ತ ಮೇಲಾದರೂ ಸಮಾನತೆಯಿಂದ ಇರಬೇಕು ಎಂಬ ಆಶಯದೊಂದಿಗೆ ಇರುವ ಸುತ್ತೋಲೆ ಮೇರೆಗೆ ಹಿಂದೂ ರುದ್ರ ಭೂಮಿ ಒದಗಿಸಲಾಗಿದೆ ಎಂದರು. ಎಸ್.ಪಿ ಪ್ರತಿಕ್ರಿಯಿಸಿ ಈ ರೀತಿ ಭೇದ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ತಿಳಿಸಿದರು.

ನೀರ್ಥಡಿ ಗ್ರಾಮದ ರಂಗನಾಥ ಸ್ವಾಮಿ ದೇವಾಲಯದಲ್ಲಿ ಇಂದಿಗೂ ಮಾದಿಗರನ್ನು ಒಳಗಡೆ ಪ್ರವೇಶಿಸಲು ಬಿಡದೆ ದೌರ್ಜನ್ಯವೆಸಗಲಾಗುತ್ತಿದೆ ಎಂದು ಮುಖಂಡರು ದೂರಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಕೌಸರ್ ರೇಷ್ಮಾ, ಮಹಿಳಾ ಮತ್ತು ಮಕ್ಕಳ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ವಿಜಯ್‌ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಪರಿಶಿಷ್ಟ ಜಾತಿ ಪಂಗಡಗಳ ಸಂಘಟನೆ ಮುಖಂಡರಾದ ಗುಮ್ಮನೂರು ಮಲ್ಲಿಕಾರ್ಜುನ್, ಹೆಗ್ಗೆರೆ ರಂಗಪ್ಪ, ಆವರಗೆರೆ ವಾಸು, ತಿಮ್ಮಣ್ಣ, ಹನುಮಂತಪ್ಪ, ರುದ್ರೇಶ್, ಹರೀಶ್, ಸೋಮಲಾಪುರ ಹನುಮಂತಪ್ಪ, ಪಂಚಾಕ್ಷರಯ್ಯ ಮತ್ತಿತರರು ಉಪಸ್ಥಿತರಿದ್ದರು.

# ಅತ್ಯಾಚಾರ ಪ್ರಕರಣಗಳನ್ನು ವಿರೋಧಿಸಿ ಸೈಕಲ್ ಜಾಥಾ



ದಾವಣಗೆರೆ ಅ.8 - ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳ ಅಪರಾಧಿಗಳಿಗೆ ಗಲ್ಲು ಶಿಕ್ಷೆ ನೀಡಬೇಕೆಂದು ಒತ್ತಾಯಿಸಿ ಹೋರಾಟ ಮಾಡುತ್ತಿರುವ ಬಸವನಪುರ, ಬನ್ನೇರುಘಟ್ಟದ 20 ವರ್ಷ ವಯಸ್ಸಿನ ದ್ವಿತೀಯ ವರ್ಷದ ಪದವಿ ವ್ಯಾಸಂಗ ಮಾಡುತ್ತಿರುವ ಬೆಂಗಳೂರು ಮೂಲದ ಕಿರಣ್ ಎಂಬಾತ ಸೈಕಲ್ ಜಾಥಾದ ಮೂಲಕ ರಾಜ್ಯದ ಅನೇಕ ಜಿಲ್ಲೆಗಳಿಗೆ ಪ್ರವಾಸ ಮಾಡುತ್ತಾ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ಈಗಾಗಲೇ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಯಾದಗಿರಿ, ಕಲಬುರ್ಗಿ, ಬೀದರ್, ಬಾಗಲಕೋಟೆ, ಕೊಪ್ಪಳ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ ಮುಖಾಂತರ ಪ್ರವಾಸ ಮಾಡಿರುವ ಕಿರಣ್, ಇಂದು ನಗರಕ್ಕೆ ಭೇಟಿ ಆಗಮಿಸಿದ್ದರು.

ಜಿಲ್ಲಾಡಳಿತ ಕಚೇರಿಗೆ ಭೇಟಿ ನೀಡಿದ್ದ ಕಿರಣ್, ಜಿಲ್ಲಾಧಿಕಾರಿಗಳಿಗೆ ಹೋರಾಟದ ಮಾಹಿತಿ ನೀಡಿದರು. ಕಿರಣ್ ಹೋರಾಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು ಶುಭ ಕೋರಿದರು.

ಎಂ.ಸಿ.ಸಿ. ಬಿ ಬ್ಲಾಕ್ 38 ನೇ ವಾರ್ಡಿನ ಮಹಾನಗರ ಪಾಲಿಕೆಯ ಸದಸ್ಯರಾದ ಗಡಿಗುಡಾಳ್ ಮಂಜುನಾಥ್ ಅವರು ಕಿರಣ್ ಅವರನ್ನು ಸ್ವಾಗತಿಸಿ, ನಗರದಲ್ಲಿ ತಂಗಲು ಅನುಕೂಲ ಮಾಡಿಕೊಟ್ಟು ಮುಂದಿನ ಪ್ರವಾಸಕ್ಕೆ ತೊಂದರೆಯಾಗದಂತೆ ಅಲ್ಪಮಟ್ಟಿನ ಆರ್ಥಿಕ ನೆರವನ್ನೂ ನೀಡಿ ಶುಭ ಕೋರಿದರು.

ಹೋರಾಟಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ ಗಡಿಗುಡಾಳ್ ಮಂಜುನಾಥ್, ಮಹಿಳೆಯರ ರಕ್ಷಣೆ ನಮ್ಮೆಲ್ಲರ ಹೊಣೆ. ಇಂತಹ ಕೃತ್ಯಗಳು ಜರುಗದಂತೆ ಸರ್ಕಾರಗಳು ಎಚ್ಚರ ವಹಿಸಬೇಕು. ಯಾವುದೇ ಸರ್ಕಾರ ಬಂದರೂ ಅಂತವರನ್ನು ಬೆಂಬಲಿಸದೆ ಸರಿಯಾದ ಕಾನೂನು ಜಾರಿಗೆ ತಂದು ಶಿಕ್ಷೆಗೆ ಒಳಪಡಿಸಬೇಕು. ಹಾಗದರೆ ಮಾತ್ರ ಮಹಿಳೆಯರು ಧೈರ್ಯವಾಗಿ ಸಮಾಜದಲ್ಲಿ ತಿರುಗಾಡಲು ಸಾಧ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಿರಣ್ ಅವರ ಹೋರಾಟಕ್ಕೆ ಎಂ. ಸಿ. ಸಿ. ಬಿ ಬ್ಲಾಕ್ ಬಡಾವಣೆಯ ಯುವ ಕಾರ್ಯಕರ್ತರಾದ ನಿಖಿಲ್, ಪ್ರಮೋದ್, ಮನು, ಪ್ರಜ್ವಲ್ ಎಸ್., ಎಸ್. ಭರತ್, ನೀಲಕಂಠಪ್ಪ, ಮನೋಜ್, ಜಿಶಾಂಕ್, ಕಿಟ್ಟಿ, ವಿನಯ್, ಮದನ್, ಶರತ್, ಕಿರಣ್, ಅರುಣ್, ಪವನ್, ಗೌತಮ್, ಸಿದ್ದೇಶ್, ವೀರೇಶ್ ಬಡಾವಣೆಯ ಅನೇಕ ಯುವಕರು ಸಹಕಾರ ನೀಡಿದರು.

# ಅಧಿಕಾರಿಗಳ ಗೈರು: ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ ಮುಂದಕ್ಕೆ



**ಹರಿಹರ: ಗೈರಾದ ಅಧಿಕಾರಿಗಳಿಗೆ ನೋಟೀಸ್ ಜಾರಿ**

ಹರಿಹರ, ಅ.8- ಇದೇ ದಿನಾಂಕ 20 ರಂದು ನಡೆಯುವ ಶ್ರೀ ವಾಲ್ಮೀಕಿ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯನ್ನು ತಹಶೀಲ್ದಾರ್ ಕೆ.ಬಿ. ರಾಮ ಚಂದ್ರಪ್ಪ ಅಧ್ಯಕ್ಷತೆಯಲ್ಲಿ ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಇಂದು ಕರೆಯಲಾಗಿತ್ತು. ಅಧಿಕಾರಿಗಳ ಗೈರು ಹಾಜರಿಯಿಂದ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಿದ ಘಟನೆ ನಡೆಯಿತು.

ಪ್ರಾರಂಭದಲ್ಲಿ ಶಶಿಧರ್ ಸಭೆಯನ್ನು ಪ್ರಾರಂಭ ಮಾಡುವುದಕ್ಕೆ ಮುಂದಾದಾಗ ಸಮಾಜದ ತಾಲ್ಲೂಕು ಅಧ್ಯಕ್ಷ ರಂಗಪ್ಪ ಜಿಗಳಿ, ನಗರ ಘಟಕದ ಅಧ್ಯಕ್ಷ ಕೆ.ಬಿ. ಮಂಜುನಾಥ್, ಮುಖಂಡರಾದ ಜಿಗಳಿ ಆನಂದಪ್ಪ, ಪುಟ್ಟಪ್ಪ, ಮಂಜುನಾಥ್ ಭಾನುವಳ್ಳಿ ಮುಂತಾದವರು ಹೆಚ್ಚು ಅಧಿಕಾರಿಗಳು ಗೈರು ಹಾಜರಾಗಿದ್ದಾರೆ.

ಒಬ್ಬ ದಾರ್ಶನಿಕರಿಗೆ ಅಗೌರವ ತೋರಿಸಿದಂತಾಗಿದೆ. ಇಂದಿನ ಸಭೆಯನ್ನು ತಾತ್ಕಾಲಿಕವಾಗಿ ಮುಂದೆ ಹಾಕಿ, ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಮುಂದಿನ ಸಭೆಗೆ ಹಾಜರಿರುವಂತೆ ಹೇಳುವುದರ ಜೊತೆಗೆ ಇಂದಿನ ಸಭೆಗೆ ಗೈರು ಆದ ಅಧಿಕಾರಿಗಳಿಗೆ ನೋಟಿಸ್ ನೀಡು ವಂತೆ ಮುಖಂಡರು ಆಗ್ರಹಿಸಿದರು.

ಗ್ರೇಡ್ 2 ತಹಶೀಲ್ದಾರ್ ಶಶಿಧರ್ ಮಾತನಾಡಿ, ಸಭೆಗೆ ಗೈರಾಗಿರುವ ಅಧಿಕಾರಿಗಳಿಗೆ ನೋಟೀಸ್ ನೀಡಲಾಗುತ್ತದೆ. ಮುಂದಿನ ಸೋಮವಾರ ಸಂಜೆ ಸಭೆ ನಡೆಸುವ ಕುರಿತು ತಹಶೀಲ್ದಾರ್ ಗಮನಕ್ಕೆ ತರಲಾಗುವುದು. ಅಂದಿನ ಸಭೆಗೆ ಎಲ್ಲಾ ಅಧಿಕಾರಿಗಳು ಹಾಜರಿರುವಂತೆ ತಿಳಿಸಲಾಗುತ್ತದೆ ಎಂದು ಹೇಳಿದರು.

ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ, ಕೃಷಿ ಇಲಾಖೆಯ ನಾರದಪ್ಪ, ತೋಟಗಾರಿಕೆ ಅಧಿಕಾರಿ ಕವಿತಾ, ಅಬಕಾರಿ ಇಲಾಖೆಯ ಶ್ವೇತಾ, ತಾ.ಪಂ. ಇಲಾಖೆ ಲಿಂಗರಾಜ್, ಸಮಾಜ ಕಲ್ಯಾಣ ಇಲಾಖೆ ನಾಸಿರ್ ಉದ್ದೀನ್ ಸಾಬ್, ಸಿಡಿಪಿಓ ಇಲಾಖೆ ನಿರ್ಮಲಾ, ವಾಲ್ಮೀಕಿ ಸಮಾಜದ ಮುಖಂಡರಾದ ನಗರಸಭೆ ಸದಸ್ಯ ದಿನೇಶ್ ಬಾಬು, ಮೂರ್ತಿ, ಮನೋಹರ, ಮಹೇಶ್ ಬೇವಿನಹಳ್ಳಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಸಮಾಜ ಕಲ್ಯಾಣ ಇಲಾಖೆಯ ಮಂಜುನಾಥ್, ತನ್ವೀರ್ ಅಹ್ಮದ್, ಜಿ.ಡಿ. ಹಾದಿಮನಿ ಇನ್ನಿತರರಿದ್ದರು.

# ದೇವರಬೆಳಕೆರೆ ಪಿಕಪ್ ಡ್ಯಾಂಗೆ ಬಾಗಿನ



ಮಲೇಬೆನ್ನೂರು, ಅ.8- ಭರ್ತಿಯಾಗಿರುವ ದೇವರಬೆಳಕೆರೆ ಪಿಕಪ್ ಡ್ಯಾಂಗೆ ಶುಕ್ರವಾರ ಹರಿಹರ ತಾಲ್ಲೂಕು ಜೆಡಿಎಸ್ ವತಿಯಿಂದ ಬಾಗಿನ ಅರ್ಪಿಸಲಾಯಿತು. ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ತಾಲ್ಲೂಕು ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಜಿ.ಪಂ. ಮಾಜಿ ಸದಸ್ಯೆ ಹೇಮಾವತಿ ಭೀಮಪ್ಪ, ತಾಲ್ಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಬಂಡೇರ ತಿಮ್ಮಣ್ಣ, ಸಿರಿಗೆರೆ ಪರಮೇಶ್ವರಪ್ಪ ಗೌಡ, ವಾಸನದ ಜಿ. ಬಸವರಾಜ್, ಸಾಲಕಟ್ಟೆ ಹಾಲಸ್ವಾಮಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಕರಿಬಸಪ್ಪ ಮತ್ತಿತರರು ಭಾಗವಹಿಸಿದ್ದರು.

# ಬರದ ನಾಡಿನ ಅರಣ್ಯ ಸಂಪತ್ತು ಉಳಿಸಿ ವನ್ಯ ಜೀವಿ ಸಂರಕ್ಷಿಸಿ

ಜಗಳೂರು, ಅ.8 - ಬರದ ನಾಡಿನಲ್ಲಿ ಸಮೃದ್ಧವಾಗಿ ಬೆಳೆದಿ ರುವ ಕೊಂಡಕುರಿ ಅಭಯಾರಣ್ಯದ ಸಂಪತ್ತನ್ನು ಉಳಿಸಿಕೊಂಡು ವನ್ಯಜೀವಿ ಸಂರಕ್ಷಣೆಗೆ ಮುಂದಾಗ ಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ಮನವಿ ಮಾಡಿದರು.

ತಾಲ್ಲೂಕಿನ ಗುರುಸಿದ್ಧಾಪುರ ಹೊಸಕೆರೆ ಬಳಿ ಅರಣ್ಯ ಇಲಾಖೆ ಹಾಗೂ ರೋಟರಿ ಕ್ಲಬ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 67ನೇ ವನ್ಯಜೀವಿ ಸಪ್ತಾಹ ಹಾಗೂ 42 ಲಕ್ಷ ರೂ. ವೆಚ್ಚದ ರಂಗಯ್ಯನದುರ್ಗ ಅರಣ್ಯ ವಿಶ್ರಾಂತಿ ಗೃಹ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಏಷ್ಯಾದಲ್ಲಿಯೇ ಅಪರೂಪವಾಗಿ ರುವ ಕೊಂಡಕುರಿ ಅಭಯಾರಣ್ಯದಲ್ಲಿ ಕೊಂಡಕುರಿಗಳ ಸಂಖ್ಯೆ 180 ರಿಂದ 120ಕ್ಕೆ ಕ್ಷೀಣಿಸುತ್ತಿದ್ದು ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸಿ ಕಾಡು ಉಳಿಸಿ



ನಾಡು ಬೆಳೆಸಬೇಕು. ಅಡುಗೆ ಉರುವಲಿಗೆ ಸರ್ಕಾರದಿಂದ ದೊರೆಯುವ ಉಚಿತ ಗ್ಯಾಸ್ ಸಿಲಿಂಡರ್ ಬಳಕೆ ಮಾಡಿ ಕೊಳ್ಳಬೇಕು. ಕೇವಲ ಉರುವಲಿಗಾಗಿ ಕಾಡನ್ನು ನಾಶಪಡಿಸ ಬೇಡಿ ಎಂದು ಶಾಸಕರು ಸಲಹೆ ನೀಡಿದರು.

ಅರಣ್ಯ ಸಂರಕ್ಷಣೆಗೆ ಹೆಚ್ಚಿನ ಅನುದಾನ ನೀಡುವುದಾಗಿ ತಿಳಿಸಿದರು. ಸುತ್ತಮುತ್ತಲಿನ ರೈತರಿಗೆ ಅಪಪ್ರಚಾರ ಮಾಡಿದ ಪರಿಣಾಮ ವಿರೋಧದ ಮಧ್ಯೆ ಕಳೆದ 2011ರ ನನ್ನ ಆಡಳಿತಾವಧಿಯಲ್ಲಿ ರಂಗಯ್ಯನದುರ್ಗ ಕೊಂಡಕುರಿ ಅಭಯಾರಣ್ಯವೆಂದು ಘೋಷಣೆ ಯಾಯಿತು. ಈ ಭಾಗದ ರೈತರ ಮಾತು ಒರಟು, ಮನಸ್ಸು ಮೃದು. ಅಮಾಯಕ ಜನರು ಇದೀಗ ಜಾಗೃತರಾಗಿದ್ದಾರೆ. ಅರಣ್ಯ ಹಾಗೂ ಪ್ರಾಣಿಗಳ ರಕ್ಷಣೆಗೆ ಮುಂದಾಗಿದ್ದಾರೆ ಎಂದರು.

ಬಳ್ಳಾರಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಸ್. ಲಿಂಗರಾಜ್ ಮಾತನಾಡಿ, ಜಗಳೂರಿನಿಂದ 20 ಕಿಮೀ ದೂರದಲ್ಲಿನ ಸುಮಾರು 723.63 ಹೆಕ್ಟೇರ್ ವ್ಯಾಪ್ತಿಯಲ್ಲಿರುವ ರಂಗಯ್ಯನ ದುರ್ಗ ಕೊಂಡಕುರಿ ಅಭಯಾರಣ್ಯ ಪ್ರದೇಶ ಕೊಂಡ ಕುರಿ ಸೇರಿದಂತೆ ಚಿರತೆ, ಹಂದಿ, ಕಿರುಬ, ಚಿಪ್ಪು ಹಂದಿ, ನರಿ, ತೋಳ, ಮೊಲ, ನವಿಲು, ಮರ ಕುಟಿಕ, ಶ್ರೀಗಂಧ, ಮತ್ತಿ, ಹೊನ್ನೆ, ಉದಯ, ಅರಳಿ, ಸೋಮೆ, ಜಾನಿ, ಅಮೃತಬಳ್ಳಿ, ತುಳಸಿ, ವಿವಿಧ ಪ್ರಾಣಿ ಪಕ್ಷಿ ಸಸ್ಯ ಸಂಕುಲಕ್ಕೆ ಆಶ್ರಯತಾಣವಾಗಿದೆ. ಪ್ರತಿಯೊಬ್ಬರೂ ಸಂರಕ್ಷಣೆಗೆ ಕೈಜೋಡಿಸಬೇಕು ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಜೆ. ಶ್ರೀನಿವಾಸಮೂರ್ತಿ, ಚೋಳರಾಜಪ್ಪ, ಟಿ. ರಾಜಣ್ಣ, ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ಉಮರ್ ಬಾದಷಾ ಕುರಗುಂದ, ಗ್ರಾ. ಪಂ. ಅಧ್ಯಕ್ಷೆ ನಾಗಮ್ಮ ಮಲ್ಲೇಶಪ್ಪ, ವಲಯ ಅರಣ್ಯಾಧಿಕಾರಿ ಜಿ.ಟಿ. ಶ್ರೀನಿವಾಸ್, ಭರತ್, ಪ್ರಕಾಶ್, ಭರತ್, ದಿನೇಶ್, ಮುಖಂಡರಾದ ಬಿಸ್ತುವಳ್ಳಿ ಬಾಬು, ಮಾಗಡಿ ಮಂಜಪ್ಪ ಮತ್ತು ಇತರರು ಭಾಗವಹಿಸಿದ್ದರು.

## ಪರಿಶಿಷ್ಟ ಪಂಗಡಕ್ಕೆ ಶೇ. 7.5 ಮೀಸಲಾತಿ ಜಾರಿಗೊಳಿಸಲು ನಾಯಕ ಸಮಾಜದ ಮನವಿ



ದಾವಣಗೆರೆ ಅ.8 -ಪರಿಶಿಷ್ಟ ಪಂಗಡಕ್ಕೆ ಶೇ. 7.5 ಮೀಸಲಾತಿಯನ್ನು ಇದೇ ದಿನಾಂಕ 20 ರೊಳಗೆ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದಿಂದ ಸರ್ಕಾರಕ್ಕೆ ಇಂದು ಮನವಿ ಸಲ್ಲಿಸಲಾಯಿತು.

ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿದ ಸಮಾಜದ ನಿಯೋಗವು, ನಿಗದಿತ ಅವಧಿಯೊಳಗೆ ಮೀಸಲಾತಿಯನ್ನು ಜಾರಿ ಗೊಳಿಸದಿದ್ದರೆ ಉಗ್ರ ಹೋರಾಟ ನಡೆಸಬೇಕಾದೀತು ಎಂದು ಎಚ್ಚರಿಸಿತು.ನಾಯಕ ಸಮಾಜದ ಹಿರಿಯ ಮುಖಂಡರೂ ಆದ ವಕೀಲ ಎನ್.ಎಂ. ಆಂಜನೇಯ ಗುರೂಜಿ, ಸಮಾಜದ ನಿರ್ದೇಶಕ ಶ್ಯಾಗಲೆ ಮಂಜುನಾಥ್ ಮತ್ತಿತರರು ನಿಯೋಗದಲ್ಲಿದ್ದರು.

## ಅಣಬೇರು ಗ್ರಾ.ಪಂ. ಅಧ್ಯಕ್ಷರಾಗಿ ಕಾವ್ಯ ಅಶೋಕ್



ದಾವಣಗೆರೆ, ಅ. 8- ತಾಲ್ಲೂಕಿನ ಅಣಬೇರು ಗ್ರಾಮ ಪಂಚಾಯ್ತಿ ಸಭಾಂಗಣದಲ್ಲಿ ಈಚೆಗೆ ನಡೆದ ಗ್ರಾ.ಪಂ. ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಗ್ರಾಮದ ಬಿಜೆಪಿ ಯುವ ಮುಖಂಡ ಬೆಳಗಟ್ಟರ ಬಿ.ಸಿ. ಅಶೋಕ್ ಅವರ ಪತ್ನಿ ಕಾವ್ಯ ಅಶೋಕ್, ಉಪಾಧ್ಯಕ್ಷರಾಗಿ ನಲ್ಕುಂದ ಗ್ರಾಮದ ಶಿವಲಿಂಗಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಗಳಾಗಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಮಹಾದೇವಪ್ಪ, ಪಿಡಿಓ ಮಹೇಶ್, ಕಾರ್ಯದರ್ಶಿ ಕೊಟ್ರೇಶ್ ಕಾರ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಸದಸ್ಯ ಕೆ.ಸಿ. ರಾಜಪ್ಪ, ಮಾಜಿ ಅಧ್ಯಕ್ಷ ಶಿವಮೂರ್ತಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಎ.ಎಂ. ನಂದೀಶ್ವರಯ್ಯ, ಮುಖಂಡರುಗಳಾದ ಕರಿಮಲ್ಲಪ್ಪರ ಶಿವಮೂರ್ತಿ, ಪೂಜಾರ್ ಶಿವಲಿಂಗಪ್ಪ, ಎಸ್. ಪಾಲಾಕ್ಷಪ್ಪ, ನಲ್ಕುಂದ ವೀರಣ್ಣ, ಮಹೇಶಣ್ಣ, ಅಜ್ಜಣ್ಣ, ಕೆ.ಎನ್. ಶಿವರಾಜ್, ಕೆ.ಎಸ್. ಮಲ್ಲಿಕಾರ್ಜುನ್, ಬಿ.ಸಿ. ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

## ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಬಸವರಾಜ್ ವಾಸನ



ಹರಿಹರ, ಅ.8- ನಗರದ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಟಿ. ಬಸವರಾಜ್ ವಾಸನ ಅವರು ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಕಾರ ಅಭಿವೃದ್ಧಿ ಚುನಾವಣಾಧಿಕಾರಿ ಎನ್.ಜಿ. ರುದ್ರಪ್ಪ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ರಾಮನಗೌಡ ಬನ್ನಿಕೋಡು, ಸಣ್ಣ ಚಂದ್ರನಾಯ್ಕ್ ಕೊಕ್ಕನೂರು, ಎಂ. ನಿಂಗನಗೌಡ ಕೊಕ್ಕನೂರು, ಎನ್. ಜಿ. ಜಯಣ್ಣ ನಂದಿಗಾವಿ, ಸಿ.ಬಿ. ಅಬ್ದುಲ್ ಹಾದಿ ಮಲೇಬೆನ್ನೂರು, ಎ. ಗಂಗಾಧರಪ್ಪ ಕೆ. ಬೇವಿನಹಳ್ಳಿ, ಎನ್. ರುದ್ರಪ್ಪ ಕಮಲಾಪುರ, ಹೆಚ್. ಆಂಜನೇಯ ಕುಂಬಳೂರು, ಕೆ.ಹೆಚ್. ಮಹೇಶ್ ಕೆಂಚನಹಳ್ಳಿ, ಕೆ. ಅಬುಜರ್ ಹರಿಹರ, ಕಾಂತರಾಜ್ ಬನ್ನಿಕೋಡು, ವನಜಾಕ್ಷಮ್ಮ ಸಂಕ್ಲೀಪುರ, ಅನುಪಮ ಭಾನುವಳ್ಳಿ, ಕೆಂಚವೀರಯ್ಯ ನಂದಿಗುಡಿ, ಕಾರ್ಯದರ್ಶಿ ಎಂ.ಎಸ್. ಗಣೇಶ್, ಬಿಜೆಪಿ ಹಿರಿಯ ಮುಖಂಡ ಎನ್.ಜಿ. ನಾಗನಗೌಡ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಪರಮೇಶ್ವರಗೌಡ್ರು, ಹಾಲೇಶಪ್ಪ, ಚನ್ನಬಸಪ್ಪ, ಆರ್.ಸಿ. ಪಾಟೀಲ್, ಕೊಟ್ರಪ್ಪ ಭಾನುವಳ್ಳಿ, ಹೊಸಳ್ಳಿ ಕರಿಬಸಪ್ಪ ಮಲೇಬೆನ್ನೂರು ಇನ್ನಿತರರಿದ್ದರು.

## ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

ಇಂದು ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಹಿರೇಮಲ್ಲನ ಹೊಳೆ ವಿ.ವಿ. ಕೇಂದ್ರದ ವ್ಯಾಪ್ತಿಯಲ್ಲಿ ಬರುವ ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಹಾಗೂ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಸೂಳೆಕೆರೆಯಲ್ಲಿ ಮಹಿಳೆಯ ಶವ ಪತ್ತೆ

ಚನ್ನಗಿರಿ, ಅ.8- ಸೂಳೆಕೆರೆಯಲ್ಲಿ ಅಪರಿಚಿತ ಮಹಿಳೆಯೋರ್ವಳ ಮೃತ ದೇಹ ಪತ್ತೆಯಾಗಿದೆ. ಕೆರೆಬಿಳಚಿ ಸಮೀಪದ ಸೂಳೆಕೆರೆ ದಡದ ಬಳಿ ನೀರಿನಲ್ಲಿ ಅಂದಾಜು 65 ರಿಂದ 70 ವರ್ಷ ವಯಸ್ಸಿನ ಮಹಿಳೆ ಶವ ತೇಲುತ್ತಿತ್ತು. ಮೃತಳ ಗುರುತು ಆಕೆಯ ಮಗಳು ಸ್ಥಳಕ್ಕಾಗಮಿಸಿ ನೋಡಿದಾಗ ಪತ್ತೆಯಾಗಿದೆ. ತನ್ನ ತಾಯಿ ಹೊಳಲ್ಕೆರೆ ತಾಲ್ಲೂಕು ಮುತ್ತಗದೂರು ಗ್ರಾಮದಲ್ಲಿ ಸಂಬಂಧಿಕರ ಮನೆಯಲ್ಲಿ ವಾಸವಾಗಿದ್ದರು. ತಾಯಿ ಕಾಣೆಯಾಗಿರುವ ವಿಚಾರ ಸಂಬಂಧಿಕರಿಂದ ತಿಳಿದು ಬಂದಿದೆ ಎಂದು ಮೃತಳ ಮಗಳು ತಿಳಿಸಿದ್ದಾಳೆ. ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಮಾನಸಿಕವಾಗಿದ್ದರು. ನೀರು ಕುಡಿಯುವು ದಕ್ಕೆ ಅಥವಾ ಮತ್ತೇನೋ ಕಾರಣಕ್ಕೆ ಸೂಳೆಕೆರೆಗೆ ಹೋದಾಗ ಈ ಘಟನೆ ಸಂಭವಿ ಸಿರಬಹುದೆಂದು ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**, ಬಟವಾಡಿ ವೃತ್ತ ತುಮಕೂರು
**8496044942, 8277409101**

15-10-2021 ಉಳವಿ, ಕಾರವಾರ, ಗೋಕರ್ಣ, ಸಿಂಥೇರಿ ರಾಕ್ ಸಹಸ್ರಲಿಂಗ, ಶಿರಸಿ, ಬನವಾಸಿ, ಯಾಣ ರೂ. 3000/- 2 ದಿನ

23-11-2021 ಗುಜರಾತ್ ವಿಮಾನ ಪ್ರವಾಸ : ಸರ್ದಾರ್ ಪ್ರತಿಮೆ, ಭಾವನಗರ, ಸೋಮನಾಥ, ನಾಗೇಶ್ವರ, ಪೋರ್ ಬಂದರ್, ದ್ವಾರಕ, ಅಹಮದಾಬಾದ್, ಮೊದೆರ 7ದಿನಗಳು ರೂ.27000/-

11-12-21 ದೆಹಲಿ ವಿಮಾನ ಪ್ರವಾಸ : ದೆಹಲಿ, ಕಾಶಿ, ಆಗ್ರಾ ಅಯೋಧ್ಯ, ಮಥುರಾ, ನೈಮಿಷಾರಣ್ಯ, 29000/- 8 ದಿನಗಳು

ಎಲ್ಲಾ ಪ್ರವಾಸಕ್ಕೂ ತಿಂಡಿ, ಊಟ, ನಾನ್ ಏಸಿ ಡೀಲಕ್ಸ್ ರೂಂ ವಸತಿ ಸೇರಿರುತ್ತದೆ.

**PRAKASHA MOTORS** Hero

**ಬೇಕಾಗಿದ್ದಾರೆ**

ನಮ್ಮ ಷೋ ರೂಂನಲ್ಲಿ **SALES EXECUTIVE** ಆಗಿ ಕೆಲಸ ನಿರ್ವಹಿಸಲು ಅನುಭವವುಳ್ಳವರು ಅಥವಾ ಯಾವುದೇ ಪದವಿ ಪಡೆದವರು, ಮೂವತ್ತು ವಯೋಮಿತಿ ಮೀರದ ಯುವಕರು ಬೇಕಾಗಿದ್ದಾರೆ. ಜೊತೆಗೆ ಷೋ ರೂಂನ ಪ್ರಚಾರದ ವಾಹನಕ್ಕೆ **ಅನುಭವವುಳ್ಳ ಚಾಲಕರೊಬ್ಬರು ಬೇಕಾಗಿದ್ದಾರೆ.** ಆಸಕ್ತರು ಸಂಪರ್ಕಿಸಬಹುದು.

**ಮೊ. : 94498 65569**

(ವಿ.ಸೂ. : ನಮ್ಮ ಪ್ರಕಾಶಾ ಹೀರೋ ಷೋ ರೂಂ ದೀಪಾವಳಿಯವರೆಗೆ ಪ್ರತಿ ಭಾನುವಾರವೂ ಕೆಲಸ ನಿರ್ವಹಿಸಲಿದೆ)

ಹೀರೋ ಮೋಟೋಕಾರ್ಪ್ ಅಧಿಕೃತ ಡೀಲರ್ಸ್
**ಪ್ರಕಾಶಾ ಮೋಟರ್ಸ್**
(ಅಂಬರ್‌ಕರ್ ಸಮೂಹ ಸಂಸ್ಥೆ)
ನಂ.1945/41, ಉಮಾಪತಿ ಆರ್ಕೇಡ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಹತ್ತಿರ, ಹರಿಹರ ರಸ್ತೆ, ದಾವಣಗೆರೆ-06.


**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
DAVANAGERE
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 23.10.2021 ಶನಿವಾರದಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.** ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಷೇರು ಖಾತೆ ನಂಬರ್ ಅಥವಾ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.**

**ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು
**ಅಂದನೂರು ಮುಪ್ಪಣ್ಣ** ಉಪಾಧ್ಯಕ್ಷರು
**ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು

## ಶಾರದಾಂಬ ದೇವಿಗೆ ಅಲಂಕಾರ



ದಾವಣಗೆರೆಯ ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ದಾವಣಗೆರೆ ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರ ಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ಶ್ರೀ ದೇವಿಗೆ ಶುಕ್ರವಾರ ವೃಷಭ ವಾಹನ (ಮಹೇಶ್ವರಿ) ಅಲಂಕಾರ ಮಾಡಲಾಗಿತ್ತು.

ಇಂದು ಶ್ರೀ ದೇವಿಗೆ ಮಯೂರ ವಾಹನಾಲಂಕಾರ (ಕೌಮಾರೀ) ಮಾಡಲಾಗುತ್ತದೆ. ಸಂಜೆ 6 ಗಂಟೆಗೆ ಶ್ರೀ ರಾಮ ನಾಮ ಮತ್ತು ಶ್ರೀ ಹನುಮಂತ ದೇವರ ನಾಮಗಳು ನಡೆಯಲಿವೆ.

## ಶಾಮನೂರಿನಲ್ಲಿ ಇಂದು ಅಲಂಕಾರ



ಶಾಮನೂರಿನ ಶ್ರೀ ಸಿದ್ದಿವಿನಾಯಕ, ಶ್ರೀ ಕಲ್ಲೇಶ್ವರ, ಶ್ರೀ ಮಂಗಳಗೌರಮ್ಮ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ 3ನೇ ದಿನವಾದ ಇಂದು ಶ್ರೀ ದೇವಿಗೆ ಚಂದ್ರಘಂಟ ಅವತಾರದ ವಿಶೇಷ ಅಲಂಕಾರ ಮಾಡಲಾಗುವುದು.

## ಶ್ರೀ ಬನಶಂಕರಿಗೆ ಗಾಯತ್ರಿ ಅಲಂಕಾರ

ದಾವಣಗೆರೆ, ಅ. 8- ನಗರದ ಹಳೆ ಬೇತೂರು ರಸ್ತೆಯ ಶ್ರೀ ಬನಶಂಕರಿ ದೇವಿಗೆ ನವರಾತ್ರಿಯ ಎರಡನೇ ದಿನವಾದ ಇಂದು ವಿಶೇಷ ಪೂಜೆ ಹಾಗೂ ವೇದಮಾತ ಗಾಯತ್ರಿ ಅಲಂಕಾರ ಮಾಡಲಾಗಿತ್ತು.







**ಡಾ. ಯದು ಕೆ. ಎಲ್.**
ಸಲಹೆಗಾರರು ನರಶಸ್ತ್ರ ಚಿಕಿತ್ಸಕರು ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸಕರು
ಆಸ್ಟರ್ ಆಸ್ಪತ್ರೆ, ಬೆಂಗಳೂರು

**ಯದು ಕಿವಿ-ಮೂಗು-ಗಂಟಲು / ಮೆದುಳು ಮತ್ತು ಬೆನ್ನುಮೂಳೆಯ ಸೆಂಟರ್**
# 462, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
**9ನೇ ಅಕ್ಟೋಬರ್ 2021,** (ಪ್ರತಿ ತಿಂಗಳ 2ನೇ ಶನಿವಾರ)
**ಬೆಳಿಗ್ಗೆ 10:00 ರಿಂದ ಸಂಜೆ 3:00ರ ವರೆಗೆ**

ಈ ಕೆಳಗಿನ ವೈದ್ಯಕೀಯ ಸ್ಥಿತಿಯಲ್ಲಿರುವವರು ಭೇಟಿ ನೀಡಬಹುದು:

- ಮೆದುಳಿನ ಅಸ್ವಸ್ಥತೆಗಳು ▪ ತಲೆ ನೋವು ▪ ಆಘಾತಕಾರಿ ಮೆದುಳು ಗಾಯಗಳು ▪ ಮೆದುಳಿನ ಗಡ್ಡೆ
- ಪಾರ್ಶ್ವವಾಯು ▪ ಅಪಸ್ಮಾರ ▪ ಬೆನ್ನುಮೂಳೆಯ ತೊಂದರೆಗಳು ▪ ಬೆನ್ನು ನೋವು ▪ ಕುತ್ತಿಗೆ ನೋವು
- ಕಾಲು ನೋವು ▪ ಆಘಾತಕಾರಿ ಬೆನ್ನುಮೂಳೆ ಗಾಯಗಳು ▪ ಬೆನ್ನುಮೂಳೆಯ ವಿರೂಪ

**ಕರೆಮಾಡಿ: 08192231033 / 9483964373 / 97420 99746**

CA-37, 24th Main, 1st Phase,
J.P. Nagar, Bangalore 560078.

Aster RV HOSPITAL
We'll Treat You Well


# ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಹೆಚ್. ಲಕ್ಷ್ಮಿದೇವಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು
ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ
ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ
ನಿಮ್ಮ ಕುಟುಂಬ ವರ್ಗದವರು...

✦ ಪತಿ : **ರಾಮಲಿಂಗಪ್ಪ ಕೆ.**
ನಿವೃತ್ತರು ಅಂಚೆ ಇಲಾಖೆ, ಓಬಳಾಪುರ.

✦ ಮಕ್ಕಳು - ಸೊಸೆಯಂದಿರು :
**ಶ್ರೀಮತಿ ರಾಧ ಕೋಂ ಗಂಗಾಧರ,** ಓಬಳಾಪುರ.
**ಶ್ರೀಮತಿ ಶಿಲ್ಪ ಕೋಂ ವಿಜಯಕುಮಾರ್,** ದಾವಣಗೆರೆ.
**ಶ್ರೀಮತಿ ಶ್ವೇತಾ ಕೋಂ ಗವಿರಂಗಪ್ಪ,** ದಾವಣಗೆರೆ.

ಮೊಮ್ಮಕ್ಕಳಾದ : **ಪ್ರದೀಪ್ ಮತ್ತು ಲಾವಣ್ಯ, ಮೇಘನಾ, ಶ್ರೇಯಸ್ ಸಿಂಚನ, ಅರ್ಥವಾ (ಚಿಂಟು)**


max




ಹಬ್ಬದ ಸಂಭ್ರಮಕ್ಕೆ ಉಡುಗೊರೆಗಳು ಮತ್ತಷ್ಟು ಸುಲಭ
ಸ್ಟೋರುಗಳಲ್ಲಿ ಲಭ್ಯ

ನಮ್ಮ ದಸರಾ ನಮ್ಮ ಮ್ಯಾಕ್ಸ್

**ಶಾಪಿಂಗ್ ಮಾಡಿ ಮತ್ತು ಆಕರ್ಷಕ ಉಡುಗೊರೆಗಳನ್ನು ಪಡೆಯಿರಿ***




ಕೇಸ್ರೋಲ್ ಸೆಟ್
ಮೌಲ್ಯ ₹1499*
₹3999 ಶಾಪಿಂಗ್ ಮೇಲೆ
*ಕೇವಲ ಪಾವತಿಸಿ ₹199


*ನಿಯಮ ಮತ್ತು ಷರತ್ತುಗಳು ಅನ್ವಯ. ಸೀಮಿತ ಅವಧಿಯ ಕೊಡುಗೆ. ಉಡುಗೊರೆ ವಿಶುವಲ್ಗಳು ಪ್ರತಿನಿಧಿತ್ವಕ್ಕೆ ಮಾತ್ರ ಮತ್ತು ವಾಸ್ತವ ಅಂಶಗಳು ಬದಲಾಗಬಹುದು. ಗಿಫ್ಟ್ ಸ್ಟಾಕ್ ಇರುವವರೆಗೆ ಕೊಡುಗೆ ಲಭ್ಯವಿರುತ್ತದೆ. maxfashion.com ಇಂದ ಖರೀದಿಗಳ ಮೇಲೆ ಕೊಡುಗೆ ಮಾನ್ಯವಲ್ಲ.

10% EXTRA CASHBACK# SBI card
#Min. Trxn: ₹3,999; Max. Cashback: ₹600 per card account.
Validity: 24 Sep - 10 Nov 2021. T&C Apply.

PRESENT ACROSS 19 COUNTRIES | AVAILABLE IN 130+ CITIES IN INDIA | 25 MILLION CUSTOMERS AND COUNTING

ಮ್ಯಾಕ್ಸ್ | ಮೆಡಿಕಲ್ ಕಾಲೇಜ್ ರೋಡ್, ಬಾಪೂಜಿ ಡೆಂಟಲ್ ಕಾಲೇಜು ಎದುರು. | maxfashion.com


# ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಸಿದ್ದಲಿಂಗನಗೌಡ್ರು, ಯು.ಬೇವಿನಹಳ್ಳಿ
ತಾಲ್ಲೂಕು ಪಂಚಾಯತಿ ಮಾಜಿ ಸದಸ್ಯರು,
ಉಚ್ಚಂಗಿದುರ್ಗ, ವಿಜಯನಗರ ಜಿಲ್ಲೆ ಹರಪನಹಳ್ಳಿ
(ತಾ), ಯು.ಬೇವಿನಹಳ್ಳಿ ವಾಸಿ

ವಿಜಯನಗರ ಜಿಲ್ಲೆ ಹರಪನಹಳ್ಳಿ (ತಾ),
ಯು.ಬೇವಿನಹಳ್ಳಿ ವಾಸಿ
**ಲಿಂ॥ ಶ್ರೀ. ಕೆ. ಸಿದ್ದಲಿಂಗನಗೌಡ್ರು**
ಇವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.

**ದಿನಾಂಕ 09/10/2021ನೇ ಶನಿವಾರದಂದು ಬೆಳಗ್ಗೆ 8:30 ಗಂಟೆಗೆ** ನನ್ನ ಪೂಜ್ಯ ಪತಿಯವರ ಪ್ರಥಮ ವರ್ಷದ ಪುಣ್ಯಸ್ಮರಣೆಯನ್ನು ಶ್ರೀ **ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,** ಪಟ್ಟಾಧ್ಯಕ್ಷರು ಶಾಖಾ ಮಠ ಸಾಣೆಹಳ್ಳಿ ಇವರ ದಿವ್ಯ ಸಾನಿಧ್ಯದಲ್ಲಿ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು**
ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು,
ಶ್ರೀ ಕೆ. ಕೆಂಚನಗೌಡ್ರು ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು,
ಮೊಮ್ಮಕ್ಕಳು, ಯು.ಬೇವಿನಹಳ್ಳಿ ಗ್ರಾಮಸ್ಥರು
ಹಾಗೂ ಬಂಧು-ಮಿತ್ರರು.
ಶ್ರೀ ರೇವಣಸಿದ್ದೇಶ್ವರ ಸ್ಟೋನ್ ಕ್ರಷರ್,
ಯು.ಬೇವಿನಹಳ್ಳಿ, ಹರಪನಹಳ್ಳಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte